ಸಂಪರ್ಕ

ಬಿಎಸ್‌ಟಿಪಿ ಸುದ್ದಿಪತ್ರ

ಸಂಪುಟ 11 । ಜುಲೈ 2026 ಸಂಚಿಕೆ

ಡಾ. ಶಾಲಿನಿ ರಜನೀಶ್, ಭಾ.ಆ.ಸೇ.
ಮುಖ್ಯ ಕಾರ್ಯದರ್ಶಿ

Dr. SHALINI RAJANEESH, I.A.S.
Chief Secretary

ಕರ್ನಾಟಕ ಸರ್ಕಾರ
Government of Karnataka



ಸಂದೇಶ

ವಿಶ್ವಾಸಾರ್ಹ ಉಪನಗರ ಸಂಪರ್ಕಕ್ಕಾಗಿ ನಗರ ಸಂಚಾರ ವ್ಯವಸ್ಥೆ

ಬೆಂಗಳೂರಿನ ಉಪನಗರ ಸಾರಿಗೆ ಯೋಜನೆ (ಬಿಎಸ್‌ಟಿಪಿ) ಕರ್ನಾಟಕದ ಸುಸ್ಥಿರ, ದಕ್ಷ ಹಾಗೂ ಭವಿಷ್ಯೋನ್ಮುಖ ನಗರ ಸಾರಿಗೆ ವ್ಯವಸ್ಥೆಯನ್ನು ನಿರ್ಮಿಸುವ ಬದ್ಧತೆಯನ್ನು ಪ್ರತಿಬಿಂಬಿಸುವ ಪರಿವರ್ತನಾತ್ಮಕ ಮೂಲಸೌಕರ್ಯ ಯೋಜನೆಯಾಗಿದೆ. ಬೆಂಗಳೂರಿನ ಹೆಚ್ಚುತ್ತಿರುವ ಸಂಚಾರ ಅಗತ್ಯಗಳನ್ನು ಪೂರೈಸುವ ಉದ್ದೇಶದಿಂದ ಪರಿಕಲ್ಪಿಸಲಾದ ಈ ಯೋಜನೆಯು ಉಪನಗರ ಸಂಪರ್ಕವನ್ನು ಗಣನೀಯವಾಗಿ ವೃದ್ಧಿಸುವುದರ ಜೊತೆಗೆ, ಸಂಚಾರ ದಟ್ಟಣೆಯನ್ನು ಕಡಿಮೆ ಮಾಡುವುದು, ಪ್ರಯಾಣದ ಸಮಯವನ್ನು ಇಳಿಸುವುದು, ಪ್ರಯಾಣಿಕರ ಅನುಭವವನ್ನು ಉತ್ತಮಗೊಳಿಸುವುದು ಹಾಗೂ ಪ್ರದೇಶದ ಆರ್ಥಿಕ ಬೆಳವಣಿಗೆ ಮತ್ತು ಸ್ಪರ್ಧಾತ್ಮಕತೆಯನ್ನು ಬಲಪಡಿಸುವಲ್ಲಿ ಮಹತ್ವದ ಪಾತ್ರ ವಹಿಸಲಿದೆ.

2020ರ ಅಕ್ಟೋಬರ್ 21ರಂದು ರೈಲ್ವೆ ಸಚಿವಾಲಯವು ರೂ. 23,342 ಕೋಟಿ ಅಂದಾಜು ವೆಚ್ಚದಲ್ಲಿ ಅನುಮೋದನೆ ನೀಡಿದ ಈ ಯೋಜನೆಯು ಭಾರತದ ಅತ್ಯಂತ ಸಮಗ್ರ ಉಪನಗರ ರೈಲು ಜಾಲಗಳಲ್ಲಿ ಒಂದಾಗಿ ರೂಪುಗೊಳ್ಳುವ ನಿರೀಕ್ಷೆಯಿದೆ. ನಮ್ಮ ಮೆಟ್ರೋ, ಬಿಎಂಟಿಸಿ ಸೇವೆಗಳು, ಭಾರತೀಯ ರೈಲ್ವೆ, ಬಸ್ ನಿಲ್ದಾಣಗಳು ಹಾಗೂ ಅಂತಿಮ ಹಂತದ ಸಾರಿಗೆ ವ್ಯವಸ್ಥೆಗಳೊಂದಿಗೆ ಸಮನ್ವಯ ಸಾಧಿಸುವ ಮೂಲಕ ನಿರಂತರ ಬಹುಮಾದ್ಯಮ ಸಂಪರ್ಕವನ್ನು ಒದಗಿಸಲು ಈ ಯೋಜನೆಯನ್ನು ರೂಪಿಸಲಾಗಿದೆ. ಇದರಿಂದ ಲಕ್ಷಾಂತರ ನಾಗರಿಕರಿಗೆ ಸಮಗ್ರ, ಸುಲಭವಾಗಿ ಪ್ರವೇಶಿಸಬಹುದಾದ ಹಾಗೂ ಪರಿಣಾಮಕಾರಿ ಸಾರ್ವಜನಿಕ ಸಾರಿಗೆ ವ್ಯವಸ್ಥೆ ಲಭ್ಯವಾಗಲಿದೆ.

ಸುಸ್ಥಿರತೆಯು ಈ ಯೋಜನೆಯ ಪ್ರಮುಖ ಆಧಾರಸ್ತಂಭವಾಗಿದೆ. ಭಾರತೀಯ ಹಸಿರು ಕಟ್ಟಡ ಮಂಡಳಿ (IGBC) ಮಾನದಂಡಗಳಿಗೆ ಅನುಗುಣವಾಗಿ ನಿಲ್ದಾಣಗಳು ಮತ್ತು ಡಿಪೋ ಸೌಲಭ್ಯಗಳನ್ನು ಅಭಿವೃದ್ಧಿಪಡಿಸಲಾಗುತ್ತಿದ್ದು, ಅತ್ಯಲ್ಪ ಇಂಧನ ಬಳಕೆ, ನೀರಿನ ಸಂರಕ್ಷಣೆ ಹಾಗೂ ಮರುಬಳಕೆಯ ತತ್ವಗಳನ್ನು ಅನುಸರಿಸಲಾಗುತ್ತಿದೆ. ಜೊತೆಗೆ, ವ್ಯಾಪಕ ಪ್ರಮಾಣದ ಪರಿಹಾರಾತ್ಮಕ ಅರಣ್ಯೀಕರಣ, ಸಸಿ ನೆಡುವ ಅಭಿಯಾನಗಳು ಹಾಗೂ ವೈಜ್ಞಾನಿಕ ವಿಧಾನದಲ್ಲಿ ಮರಗಳ ಸ್ಥಳಾಂತರ ಕಾರ್ಯಕ್ರಮಗಳನ್ನು ಕೈಗೊಳ್ಳುವ ಮೂಲಕ ಬೆಂಗಳೂರಿನ ಹಸಿರು ಪರಿಸರವನ್ನು ಸಂರಕ್ಷಿಸಿ ಮತ್ತಷ್ಟು ವೃದ್ಧಿಸುವಲ್ಲಿ ಯೋಜನೆಯು ತನ್ನ ಪರಿಸರ ಬದ್ಧತೆಯನ್ನು ಪ್ರದರ್ಶಿಸುತ್ತಿದೆ.

ಯೋಜನೆಯ ವಿವಿಧ ಹಂತಗಳಲ್ಲಿ ಸಾಧಿಸಿರುವ ಗಮನಾರ್ಹ ಪ್ರಗತಿಯನ್ನು ದಾಖಲಿಸಲು ನನಗೆ ಸಂತೋಷವಾಗುತ್ತಿದೆ. ಕಾರಿಡಾರ್–2 (ಬೆನ್ನಿಗಾನಹಳ್ಳಿ–ಚಿಕ್ಕಬಾಣಾವರ) ಮತ್ತು ಕಾರಿಡಾರ್–4 (ಹೀಲಲಿಗೆ–ರಾಜಾನುಕುಂಟೆ) ಮಾರ್ಗಗಳಲ್ಲಿ ನಿರ್ಮಾಣ ಕಾರ್ಯಗಳು ವೇಗವಾಗಿ ಸಾಗುತ್ತಿದ್ದು, 30 ನಿಲ್ದಾಣಗಳಲ್ಲಿ ಕಾಮಗಾರಿ ಪ್ರಗತಿಯಲ್ಲಿದೆ. ಕಾರಿಡಾರ್–2ಕ್ಕೆ ಅಗತ್ಯವಿರುವ ಭೂಸ್ವಾಧೀನ ಪ್ರಕ್ರಿಯೆ ಪೂರ್ಣಗೊಂಡಿದ್ದು, ಕಾರಿಡಾರ್–4ರ ಭೂಸ್ವಾಧೀನ ಪ್ರಕ್ರಿಯೆಯೂ ಅಂತಿಮ ಹಂತದಲ್ಲಿದೆ. ಜೊತೆಗೆ, ಅಕ್ಕುಪೇಟೆ ಡಿಪೋಗಾಗಿ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವಾಲಯದಿಂದ (MoEF&CC) ಹಂತ–II ಅರಣ್ಯ ಅನುಮೋದನೆ ದೊರೆತಿರುವುದು ಯೋಜನೆಯ ಅನುಷ್ಠಾನದಲ್ಲಿ ಮತ್ತೊಂದು ಮಹತ್ವದ ಮೈಲಿಗಲ್ಲಾಗಿದೆ.

ಕರ್ನಾಟಕ ಸರ್ಕಾರವು ರೈಲ್ವೆ ಸಚಿವಾಲಯ ಹಾಗೂ ರೈಲ್ವೆ ಮಂಡಳಿಯ ಸಹಯೋಗದಲ್ಲಿ ಯೋಜನೆಯ ಪ್ರಗತಿಯನ್ನು ನಿರಂತರವಾಗಿ ಮೇಲ್ವಿಚಾರಣೆ ಮಾಡುತ್ತಿದ್ದು, ನಿಗದಿತ ಸಮಯದಲ್ಲಿ ಅನುಷ್ಠಾನ ಹಾಗೂ ಕಾರ್ಯಗತಗೊಳಿಸುವಿಕೆಯಲ್ಲಿನ ಸವಾಲುಗಳಿಗೆ ಪರಿಣಾಮಕಾರಿ ಪರಿಹಾರ ಒದಗಿಸುವತ್ತ ವಿಶೇಷ ಗಮನ ಹರಿಸಿದೆ. ಗೌರವಾನ್ವಿತ ಪ್ರಧಾನಮಂತ್ರಿಯವರ ಅಧ್ಯಕ್ಷತೆಯ ಪ್ರಗತಿ (PRAGATI) ವೇದಿಕೆಯಲ್ಲಿ ಯೋಜನೆಯ ನಿಯಮಿತ ಪರಿಶೀಲನೆ ನಡೆದಿರುವುದು ಇದರ ರಾಷ್ಟ್ರೀಯ ಮಹತ್ವವನ್ನು ಮತ್ತಷ್ಟು ದೃಢಪಡಿಸುತ್ತದೆ. ಯೋಜನೆಯ ತ್ವರಿತ ಅನುಷ್ಠಾನ ಮತ್ತು ಸಕಾಲಿಕ ಪೂರ್ಣಗೊಳಿಸುವಿಕೆಗೆ ಕರ್ನಾಟಕ ಸರ್ಕಾರ ತನ್ನ ಸಂಪೂರ್ಣ ಸಹಕಾರವನ್ನು ಮುಂದುವರಿಸಲಿದೆ.

ಯೋಜನೆಗೆ ಆರ್ಥಿಕ ಹಾಗೂ ತಾಂತ್ರಿಕ ಬೆಂಬಲ ನೀಡುತ್ತಿರುವ ಅಂತರರಾಷ್ಟ್ರೀಯ ಹಣಕಾಸು ಪಾಲುದಾರರಾದ KfW ಮತ್ತು EIB ಸೇರಿದಂತೆ ಎಲ್ಲಾ ಸಂಸ್ಥೆಗಳ ಅಮೂಲ್ಯ ಕೊಡುಗೆಯನ್ನು ನಾನು ಕೃತಜ್ಞತೆಯಿಂದ ಸ್ಮರಿಸುತ್ತೇನೆ. ಅವರ ನಿಯಮಿತ ಪರಿಶೀಲನೆಗಳು ಮತ್ತು ತಾಂತ್ರಿಕ ಮಾರ್ಗದರ್ಶನವು ಯೋಜನಾ ನಿರ್ವಹಣೆ, ಪರಿಸರ ಸಂರಕ್ಷಣೆ, ಸುರಕ್ಷತೆ ಹಾಗೂ ಸಾಮಾಜಿಕ ಭದ್ರತಾ ಮಾನದಂಡಗಳಲ್ಲಿ ಜಾಗತಿಕ ಗುಣಮಟ್ಟವನ್ನು ಕಾಯ್ದುಕೊಳ್ಳಲು ನೆರವಾಗುತ್ತಿದ್ದು, ಸುಸ್ಥಿರ ಅಭಿವೃದ್ಧಿಯ ಸಮಗ್ರ ದೃಷ್ಟಿಕೋನವನ್ನು ಬಲಪಡಿಸುತ್ತಿವೆ.

ಬಿಎಸ್‌ಟಿಪಿ ಕೇವಲ ಒಂದು ಸಾರಿಗೆ ಯೋಜನೆಯಲ್ಲ; ಇದು ಬೆಂಗಳೂರಿನ ಭವಿಷ್ಯದ ಅಭಿವೃದ್ಧಿಗೆ ಕೈಗೊಂಡಿರುವ ಮಹತ್ವದ ಮೂಲಸೌಕರ್ಯ ಹೂಡಿಕೆಯಾಗಿದೆ. ಸಂಪರ್ಕವನ್ನು ಬಲಪಡಿಸುವುದು, ಸುಸ್ಥಿರ ಸಂಚಾರ ವ್ಯವಸ್ಥೆಯನ್ನು ಉತ್ತೇಜಿಸುವುದು, ಇಂಗಾಲದ ಹೊರಸೂಸುವಿಕೆಯನ್ನು ಕಡಿಮೆ ಮಾಡುವುದು ಹಾಗೂ ನಾಗರಿಕರ ಜೀವನಮಟ್ಟವನ್ನು ಉತ್ತಮಗೊಳಿಸುವ ಮೂಲಕ ಈ ಯೋಜನೆಯು ನಗರದ ದೀರ್ಘಕಾಲೀನ ಬೆಳವಣಿಗೆ ಮತ್ತು ಸ್ಥೈರ್ಯಕ್ಕೆ ಮಹತ್ತರ ಕೊಡುಗೆ ನೀಡಲಿದೆ.

ಎಲ್ಲಾ ಪಾಲುದಾರರ ಒಗ್ಗಟ್ಟಿನ ಪ್ರಯತ್ನಗಳು ಹಾಗೂ ಕ–ರೈಡ್ ಮತ್ತು ಅದರ ಸಹಭಾಗಿಗಳ ಅಚಲ ಬದ್ಧತೆಯೊಂದಿಗೆ, ಬಿಎಸ್‌ಟಿಪಿ ಯೋಜನೆಯು ಯಶಸ್ವಿಯಾಗಿ ಪೂರ್ಣಗೊಳ್ಳುವುದಲ್ಲದೆ, ಸುಸ್ಥಿರ, ಸಮಗ್ರ ಹಾಗೂ ನಾಗರಿಕ–ಕೇಂದ್ರಿತ ನಗರ ಸಂಚಾರ ವ್ಯವಸ್ಥೆಯ ರಾಷ್ಟ್ರೀಯ ಮಾದರಿಯಾಗಿ ಹೊರಹೊಮ್ಮಲಿದೆ ಎಂಬ ದೃಢ ವಿಶ್ವಾಸ ನನಗಿದೆ.

ಕ–ರೈಡ್/ಬಿ–ರೈಡ್ ಸಂಸ್ಥೆಗೆ ನನ್ನ ಹೃತ್ಪೂರ್ವಕ ಶುಭಾಶಯಗಳನ್ನು ಕೋರುತ್ತೇನೆ!

(ಡಾ. ಶಾಲಿನಿ ರಜನೀಶ್)
ಸರ್ಕಾರದ ಮುಖ್ಯ ಕಾರ್ಯದರ್ಶಿ
ಮತ್ತು
ಅಧ್ಯಕ್ಷರು ಕ–ರೈಡ್/ಬಿ–ರೈಡ್



ವ್ಯವಸ್ಥಾಪಕ ನಿರ್ದೇಶಕರ ಆಶಯ ನುಡಿ

ಶ್ರೀ ಲಕ್ಷ್ಮಣ್ ಸಿಂಗ್, IRSE
ವ್ಯವಸ್ಥಾಪಕ ನಿರ್ದೇಶಕರು, ಕ-ರೈಡ್ / ಬಿ-ರೈಡ್

ನಮ್ಮ ಓದುಗರಿಗೆ ಶುಭಾಶಯಗಳು!

ಬೆಂಗಳೂರು ಉಪನಗರ ಸಾರಿಗೆ ಯೋಜನೆ (BSTP) ಸಮಗ್ರ, ಬಹುಮಾಧ್ಯಮ (Multimodal) ಉಪನಗರ ಸಾರಿಗೆ ಜಾಲವನ್ನು ಅಭಿವೃದ್ಧಿಪಡಿಸುವ ಉದ್ದೇಶದಿಂದ ಕಾರ್ಯತಂತ್ರದ ದೃಷ್ಟಿಯಿಂದ ರೂಪಿಸಲಾದ ಮಹತ್ವದ ಯೋಜನೆಯಾಗಿದೆ. ಈ ಯೋಜನೆಯು ಉಪನಗರ ರೈಲು ನಿಲ್ದಾಣಗಳನ್ನು ಕೇವಲ ಪ್ರಯಾಣ ಕೇಂದ್ರಗಳಾಗಿಯೇ ಅಲ್ಲದೆ, ಆಧುನಿಕ ಸೌಲಭ್ಯಗಳನ್ನು ಒಳಗೊಂಡ ಗಮ್ಯಸ್ಥಾನಗಳಾಗಿ ಅಭಿವೃದ್ಧಿಪಡಿಸಿ, ಬೆಂಗಳೂರು ಮಹಾನಗರ ಪ್ರದೇಶದಾದ್ಯಂತ ಸಂಪರ್ಕ, ಸುಲಭ ಪ್ರವೇಶ ಮತ್ತು ಸುಸ್ಥಿರ ನಗರ ಸಂಚಾರ ವ್ಯವಸ್ಥೆಯನ್ನು ಮತ್ತಷ್ಟು ಬಲಪಡಿಸುವ ಗುರಿಯನ್ನು ಹೊಂದಿದೆ. ಕಳೆದ ಕೆಲವು ತಿಂಗಳುಗಳಲ್ಲಿ ಯೋಜನೆಯ ಅನುಷ್ಠಾನದ ಸಂದರ್ಭದಲ್ಲಿ ಹಲವು ಸವಾಲುಗಳು ಎದುರಾದರೂ, ಸಮರ್ಪಕ ಯೋಜನಾ ರೂಪಣೆ, ಪಾಲುದಾರರೊಂದಿಗೆ ಸಕ್ರಿಯ ಸಮನ್ವಯ ಹಾಗೂ ಸಕಾಲಿಕ ಮಧ್ಯಸ್ಥಿಕೆಗಳ ಮೂಲಕ ವಿಳಂಬವನ್ನು ತಗ್ಗಿಸಿ ಯೋಜನೆಯ ಪ್ರಗತಿಯನ್ನು ನಿರಂತರವಾಗಿ ಕಾಯ್ದುಕೊಳ್ಳಲು ಪರಿಣಾಮಕಾರಿ ಕ್ರಮಗಳನ್ನು ಕೈಗೊಳ್ಳಲಾಗಿದೆ.

2026ರ ಜೂನ್ 6 ಮತ್ತು 7ರಂದು, KfW ಡೆವಲಪ್‌ಮೆಂಟ್ ಬ್ಯಾಂಕ್ ಹಾಗೂ ಯುರೋಪಿಯನ್ ಇನ್ವೆಸ್ಟ್‌ಮೆಂಟ್ ಬ್ಯಾಂಕ್ (EIB) ಪ್ರತಿನಿಧಿಗಳನ್ನು ಒಳಗೊಂಡ ಹಣಕಾಸು ಸಂಸ್ಥೆಗಳ ಪರಿಶೀಲನಾ ತಂಡವು ಕ-ರೈಡ್‌ಗೆ ಭೇಟಿ ನೀಡಿ ಯೋಜನೆಯ ಪ್ರಗತಿಯನ್ನು ಪರಿಶೀಲಿಸಿತು. ಸಭೆಗಳಲ್ಲಿ ಹಣಕಾಸು ನೆರವನ್ನು ಸುಗಮಗೊಳಿಸುವುದು ಹಾಗೂ ನಿಧಿಯ ಕಂತುಗಳನ್ನು ಸಕಾಲದಲ್ಲಿ ಬಿಡುಗಡೆ ಮಾಡುವ ಕುರಿತು ಸಮಗ್ರ ಚರ್ಚೆಗಳು ನಡೆದವು. ನಿಯೋಗವು ಕಾರಿಡಾರ್-2ರ ವಿವಿಧ ಕಾಮಗಾರಿ ಸ್ಥಳಗಳಿಗೆ ಭೇಟಿ ನೀಡಿ ಯಶವಂತಪುರ, ಶೆಟ್ಟಿಹಳ್ಳಿ ಹಾಗೂ ಮ್ಯಾದರಹಳ್ಳಿ ನಿಲ್ದಾಣಗಳಲ್ಲಿ ನಡೆಯುತ್ತಿರುವ ಕಾಮಗಾರಿಗಳ ಪ್ರಗತಿಯನ್ನು ಪರಿಶೀಲಿಸಿತು.

2026ರ ಜೂನ್ 10ರಂದು, ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಕರ್ಯ ಅಭಿವೃದ್ಧಿ ಸಚಿವರಾದ ಗೌರವಾನ್ವಿತ ಡಾ. ಎಂ.ಬಿ. ಪಾಟೀಲ ಅವರು ಬೆಂಗಳೂರು ಉಪನಗರ ಸಾರಿಗೆ ಯೋಜನೆಯ ವಿವಿಧ ಕಾಮಗಾರಿಗಳ ಸಮಗ್ರ ಪರಿಶೀಲನೆ ನಡೆಸಿದರು. ಇದಲ್ಲದೆ, 2026ರ ಜೂನ್ 13ರಂದು, ಕೇಂದ್ರ ಸಚಿವ ಸಂಪುಟ ಕಾರ್ಯದರ್ಶಿಯವರ ಅಧೀನದಲ್ಲಿರುವ ಪ್ರಾಜೆಕ್ಟ್ ಮಾನಿಟರಿಂಗ್ ಗ್ರೂಪ್ (PMG) ಯೋಜನೆಯ ಪ್ರಗತಿಯನ್ನು ಪರಿಶೀಲಿಸಿತು. ಭಾರತದಲ್ಲಿ ಮೂಲಸೌಕರ್ಯ ಯೋಜನೆಗಳ ಅನುಷ್ಠಾನದಲ್ಲಿ ಎದುರಾಗುವ ಅಡೆತಡೆಗಳನ್ನು ನಿವಾರಿಸಿ, ಅವುಗಳನ್ನು ತ್ವರಿತಗತಿಯಲ್ಲಿ ಪೂರ್ಣಗೊಳಿಸಲು ಸ್ಥಾಪಿಸಲಾದ ಸಾಂಸ್ಥಿಕ ವ್ಯವಸ್ಥೆಯೇ ಆಗಿದೆ. ಈ ಸಂದರ್ಭದಲ್ಲಿ ಯೋಜನೆಯ ಒಟ್ಟಾರೆ ಪ್ರಗತಿ, ಅನುಷ್ಠಾನದಲ್ಲಿ ಎದುರಾಗುತ್ತಿರುವ ಸವಾಲುಗಳು, ವಿಳಂಬ ನಿವಾರಣೆಗೆ ಕೈಗೊಂಡ ಕ್ರಮಗಳು ಹಾಗೂ ಪ್ರಗತಿ (PRAGATI) ಸಭೆಯಲ್ಲಿ ನೀಡಿದ ಗುರಿಗಳನ್ನು ಸಾಧಿಸಲು ರೂಪಿಸಿರುವ ಕಾರ್ಯತಂತ್ರದ ಕುರಿತು ತಂಡಕ್ಕೆ ವಿವರಿಸಲಾಯಿತು.

ಯೋಜನೆಯ ಪ್ರಮುಖ ಸಾಧನೆಗಳಲ್ಲಿ ಒಂದಾಗಿ, ಕಾರಿಡಾರ್-2ರ ರೈಲುಗಳ ಕಾರ್ಯಾಚರಣೆ ಮತ್ತು ನಿರ್ವಹಣೆಗೆ ಅಗತ್ಯವಾದ ಸೋಲದೇವನಹಳ್ಳಿ ಡಿಪೋ ನಿರ್ಮಾಣಕ್ಕಾಗಿ ಟೆಂಡರ್ ಆಹ್ವಾನಿಸಲಾಗಿದೆ. ಸುಮಾರು ರೂ. 200.03 ಕೋಟಿ (ಜಿಎಸ್‌ಟಿ ಹೊರತುಪಡಿಸಿ) ಅಂದಾಜು ವೆಚ್ಚದ ಈ ಡಿಪೋ ನಿರ್ಮಾಣಕ್ಕೆ ಜರ್ಮನಿಯ KfW ಡೆವಲಪ್‌ಮೆಂಟ್ ಬ್ಯಾಂಕ್ ಹಣಕಾಸು ನೆರವು ಒದಗಿಸಲಿದೆ.

ಅನುಷ್ಠಾನದ ಹಂತದಲ್ಲಿಯೂ ಮಹತ್ವದ ಪ್ರಗತಿ ಸಾಧಿಸಲಾಗಿದೆ. ಅಕ್ಕುಪೇಟೆ ಡಿಪೋ ಕಾಮಗಾರಿ ಕೈಗೊಳ್ಳಲು ಅಗತ್ಯವಾದ ಸರ್ಕಾರಿ ಆದೇಶವನ್ನು ಪಡೆಯಲಾಗಿದ್ದು, ಡಿಪೋ ಸಂಪರ್ಕ ಮಾರ್ಗಕ್ಕಾಗಿ ಖಾಸಗಿ ಭೂಸ್ವಾಧೀನ ಪ್ರಕ್ರಿಯೆ ಪ್ರಗತಿಯಲ್ಲಿದೆ. ಕಾರಿಡಾರ್-2ರ ಸುಮಾರು 9 ಕಿಲೋಮೀಟರ್ ವಿಯಾಡಕ್ಟ್ ಕಾಮಗಾರಿಗೆ ಹಾಗೂ ಕಾರಿಡಾರ್-4ರ 22 ಕಿಲೋಮೀಟರ್ ವ್ಯಾಪ್ತಿಯ ಎರಡು ಪ್ರಮುಖ ಪ್ಯಾಕೇಜ್‌ಗಳಿಗೆ ಟೆಂಡರ್ ಆಹ್ವಾನಿಸಲಾಗಿದೆ. ಕಾರಿಡಾರ್-4ರ ಉಳಿದ ಪ್ಯಾಕೇಜ್‌ಗಳಿಗೆ 2026ರ ಜುಲೈ ತಿಂಗಳಲ್ಲಿ ಟೆಂಡರ್ ಆಹ್ವಾನಿಸುವ ಯೋಜನೆಯಿದೆ. ಪ್ರಸ್ತುತ ಯೋಜನೆಯ ಭೌತಿಕ ಪ್ರಗತಿ 19.95% ಹಾಗೂ ಹಣಕಾಸು ಪ್ರಗತಿ 20.66% ತಲುಪಿದೆ. ಬೆಂಗಳೂರಿನ ನಗರ ಮತ್ತು ಉಪನಗರ ಸಂಚಾರ ವ್ಯವಸ್ಥೆಯಲ್ಲಿ ಮಹತ್ವದ ಪರಿವರ್ತನೆ ತರಲು ಯೋಜನೆ ವೇಗವಾಗಿ ಮುಂದುವರಿಯುತ್ತಿರುವುದು ಸಂತಸದ ವಿಷಯವಾಗಿದೆ.

ಕಾರಿಡಾರ್-4ರ ಪ್ಯಾಕೇಜ್-1 ಮತ್ತು ಪ್ಯಾಕೇಜ್-2 ಅಡಿಯಲ್ಲಿ ಲೆವೆಲ್ ಕ್ರಾಸಿಂಗ್ ನಿರ್ಮೂಲನೆ ಕಾಮಗಾರಿಗಳ ಟೆಂಡರ್ ಪ್ರಕ್ರಿಯೆ ಆರಂಭವಾಗಿದೆ. ಈ ಯೋಜನೆಯಲ್ಲಿ ರಸ್ತೆ ಮಟ್ಟವನ್ನು ಬದಲಾಯಿಸುವ ಬದಲು ರೈಲು ಹಳಿಗಳನ್ನು ಮೇಲಕ್ಕೆ ಎತ್ತುವ ನವೀನ ಎಂಜಿನಿಯರಿಂಗ್ ವಿಧಾನವನ್ನು ಅಳವಡಿಸಿಕೊಂಡು ಒಟ್ಟು 11 ರೈಲ್ವೆ ಲೆವೆಲ್ ಕ್ರಾಸಿಂಗ್‌ಗಳನ್ನು ನಿರ್ಮೂಲನೆ ಮಾಡಲಾಗುತ್ತಿದೆ. ಈ ವಿಧಾನವು ಭೂಸ್ವಾಧೀನದ ಅಗತ್ಯವನ್ನು ಕಡಿಮೆ ಮಾಡುವುದು, ಯೋಜನಾ ವೆಚ್ಚವನ್ನು ಉಳಿತಾಯ ಮಾಡುವುದು, ಸಂಚಾರ ದಟ್ಟಣೆಯನ್ನು ನಿವಾರಿಸುವುದು, ನೀರು ನಿಲ್ಲುವ ಸಮಸ್ಯೆಗೆ ಪರಿಹಾರ ಒದಗಿಸುವುದು ಹಾಗೂ ಸುರಕ್ಷಿತ ಮತ್ತು ಪರಿಣಾಮಕಾರಿ ಸಂಚಾರ ವ್ಯವಸ್ಥೆಯನ್ನು ಒದಗಿಸುವ ಉದ್ದೇಶ ಹೊಂದಿದೆ.

ಬಹುಮಾಧ್ಯಮ ಸಂಯೋಜನೆ (Multimodal Integration) ದೃಷ್ಟಿಯಿಂದ, ಬೆಂಗಳೂರು ಮೆಟ್ರೋ ರೈಲು ನಿಗಮ (BMRCL) ಹಾಗೂ ಕ-ರೈಡ್ ಅಧಿಕಾರಿಗಳು ಜಂಟಿಯಾಗಿ ಪರಿಶೀಲನೆ ನಡೆಸಿ, ಬಿಎಸ್‌ಟಿಪಿಯ ಕಾರಿಡಾರ್-4 ಹಾಗೂ ಪ್ರಸ್ತಾವಿತ ಮೆಟ್ರೋ ವಿಮಾನ ನಿಲ್ದಾಣ ಮಾರ್ಗದ ನಡುವಿನ ಸಂಪರ್ಕವನ್ನು ಮೌಲ್ಯಮಾಪನ ಮಾಡಿದ್ದಾರೆ. ಜೊತೆಗೆ, 22ನೇ ಬಿ-ರೈಡ್ ನಿರ್ದೇಶಕ ಮಂಡಳಿ ಸಭೆಯಲ್ಲಿ, ವಿಮಾನ ನಿಲ್ದಾಣ ಸಂಪರ್ಕ ಮಾರ್ಗ ಸೇರಿದಂತೆ ಡಿಪಿಆರ್‌ನಲ್ಲಿ ಅನುಮೋದಿತ ಎಲ್ಲಾ ಕಾಮಗಾರಿಗಳನ್ನು ಹಂತ ಹಂತವಾಗಿ ಅನುಷ್ಠಾನಗೊಳಿಸಲು ಅನುಮೋದನೆ ನೀಡಲಾಗಿದ್ದು, ಯೋಜನೆಯ ಅಗತ್ಯತೆ ಹಾಗೂ ಲಭ್ಯವಿರುವ ಹಣಕಾಸಿನ ಆಧಾರದ ಮೇಲೆ ಕಾರಿಡಾರ್‌ಗಳು ಮತ್ತು ಪ್ಯಾಕೇಜ್‌ಗಳಿಗೆ ಆದ್ಯತೆ ನೀಡಲು ನಿರ್ಧರಿಸಲಾಗಿದೆ.

ಮತ್ತೊಂದು ಮಹತ್ವದ ಬೆಳವಣಿಗೆಯಾಗಿ, ಬಿಎಸ್‌ಟಿಪಿಯ ಎಲ್ಲಾ ಕಾರಿಡಾರ್‌ಗಳಲ್ಲಿ ಹಿಂದಿನ CBTC ಪ್ರಸ್ತಾವನೆಯ ಬದಲಿಗೆ ಯುರೋಪಿಯನ್ ಟ್ರೈನ್ ಕಂಟ್ರೋಲ್ ಸಿಸ್ಟಮ್ (ETCS Level-2) ಅಳವಡಿಸಲು ಅನುಮೋದನೆ ದೊರೆತಿದೆ. ಈ ನಿರ್ಧಾರವು ರೈಲ್ವೆ ಸಿಗ್ನಲಿಂಗ್, ಸುರಕ್ಷತೆ ಹಾಗೂ ಕಾರ್ಯಾಚರಣಾ ದಕ್ಷತೆಯಲ್ಲಿ ಜಾಗತಿಕ ಅತ್ಯುತ್ತಮ ಪದ್ಧತಿಗಳನ್ನು ಅಳವಡಿಸಿಕೊಳ್ಳುವತ್ತ ಮಹತ್ವದ ಹೆಜ್ಜೆಯಾಗಿದೆ.

ನವದೆಹಲಿಯಲ್ಲಿ ನಡೆದ Economic Times (ET) Infra Rail Show-2026 ಹಾಗೂ 7th Rail & Metro Technology Conclave & Expo-2026 ಕಾರ್ಯಕ್ರಮಗಳಲ್ಲಿ ನನಗೆ ಪ್ಯಾನೆಲ್ ಸದಸ್ಯರಾಗಿ ಭಾಗವಹಿಸುವ ಅವಕಾಶ ದೊರೆತಿದ್ದು, ಬೆಂಗಳೂರು ಉಪನಗರ ಸಾರಿಗೆ ಯೋಜನೆಯ ಪ್ರಗತಿ, ಬಹುಮಾಧ್ಯಮ ಸಂಯೋಜನೆ, ಕೃತಕ ಬುದ್ಧಿಮತ್ತೆ (AI), ಡಿಜಿಟಲ್ ಟ್ವಿನ್ಸ್, ಇಂಟರ್ನೆಟ್ ಆಫ್ ಥಿಂಗ್ಸ್ (IoT), ಸ್ಮಾರ್ಟ್ ನಿಲ್ದಾಣಗಳು, ಸುಧಾರಿತ ಸಿಗ್ನಲಿಂಗ್ ವ್ಯವಸ್ಥೆ ಹಾಗೂ ಪೂರ್ವಾನುಮಾನ ಆಧಾರಿತ ಆಸ್ತಿ ನಿರ್ವಹಣೆ ಸೇರಿದಂತೆ ಆಧುನಿಕ ತಂತ್ರಜ್ಞಾನಗಳ ಅಳವಡಿಕೆ ಮೂಲಕ ಬೆಂಗಳೂರಿನ ನಗರ ಸಂಚಾರ ಮತ್ತು ಮೂಲಸೌಕರ್ಯದಲ್ಲಿ ಆಗುತ್ತಿರುವ ಪರಿವರ್ತನೆ ಕುರಿತು ನನ್ನ ಅಭಿಪ್ರಾಯಗಳನ್ನು ಹಂಚಿಕೊಳ್ಳುವ ಅವಕಾಶ ದೊರೆಯಿತು.

ಈ ಕಾರ್ಯಕ್ರಮದಲ್ಲಿ ಕ-ರೈಡ್ ಪ್ರೀಮಿಯಂ ಸ್ಟಾಲ್ ಪ್ರದರ್ಶಕರಾಗಿ ಭಾಗವಹಿಸಿ, ಬಿಎಸ್‌ಟಿಪಿಯ ಪ್ರಮುಖ ಸಾಧನೆಗಳು ಹಾಗೂ ನವೀನ ವೈಶಿಷ್ಟ್ಯಗಳನ್ನು ಪ್ರದರ್ಶಿಸಿತು. ಇದರಿಂದ ವಿವಿಧ ಸರ್ಕಾರಿ ಸಂಸ್ಥೆಗಳು, ಕೈಗಾರಿಕಾ ಪಾಲುದಾರರು, ತಂತ್ರಜ್ಞಾನ ಪೂರೈಕೆದಾರರು, ವಿಷಯ ಪರಿಣಿತರು ಹಾಗೂ ಮೂಲಸೌಕರ್ಯ ಅಭಿವೃದ್ಧಿ ಸಂಸ್ಥೆಗಳೊಂದಿಗೆ ಜ್ಞಾನ ವಿನಿಮಯ ಹಾಗೂ ಪರಿಣಾಮಕಾರಿ ಸಹಯೋಗಕ್ಕೆ ವೇದಿಕೆ ಒದಗಿತು.

ಯೋಜನೆಯಲ್ಲಿ ಇನ್ನೂ ಸಾಕಷ್ಟು ಕಾರ್ಯ ಬಾಕಿ ಇದ್ದರೂ, ಕಳೆದ ಕೆಲವು ತಿಂಗಳುಗಳಲ್ಲಿ ಸಾಧಿಸಿರುವ ಪ್ರಗತಿ ಯೋಜನೆಯ ಸರಿಯಾದ ದಿಕ್ಕು ಮತ್ತು ವೇಗವನ್ನು ಮತ್ತಷ್ಟು ದೃಢಪಡಿಸಿದೆ. ನಿರಂತರ ವೃಕ್ಷಾರೋಪಣ ಅಭಿಯಾನಗಳು, ಪರಿಹಾರಾತ್ಮಕ ಅರಣ್ಯೀಕರಣ ಕಾರ್ಯಕ್ರಮಗಳು ಹಾಗೂ ಸುಸ್ಥಿರ ನಿರ್ಮಾಣ ಪದ್ಧತಿಗಳ ಮೂಲಕ ಪರಿಸರ ಸಂರಕ್ಷಣೆಗೆ ನಮ್ಮ ಬದ್ಧತೆಯನ್ನು ಮುಂದುವರಿಸುತ್ತಿದ್ದೇವೆ. ಅದೇ ರೀತಿ, ಯೋಜನೆಯಿಂದ ಬಾಧಿತರಾಗುವ ಸಮುದಾಯಗಳಿಗಾಗಿ ಪುನರ್ವಸತಿ ಕಾರ್ಯಯೋಜನೆಗಳು (Resettlement Action Plans) ಮತ್ತು ಜೀವನೋಪಾಯ ಪುನಃಸ್ಥಾಪನಾ ಕ್ರಮಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವ ಮೂಲಕ ನಮ್ಮ ಸಾಮಾಜಿಕ ಹೊಣೆಗಾರಿಕೆಯನ್ನು ಸಮರ್ಪಕವಾಗಿ ನಿರ್ವಹಿಸುತ್ತಿದ್ದೇವೆ.

ಕರ್ನಾಟಕ ಸರ್ಕಾರ, ರೈಲ್ವೆ ಸಚಿವಾಲಯ, ಹಣಕಾಸು ಸಂಸ್ಥೆಗಳು, ಪಾಲುದಾರ ಸಂಸ್ಥೆಗಳು, ಗುತ್ತಿಗೆದಾರರು, ಸಲಹೆಗಾರರು ಹಾಗೂ ಕ-ರೈಡ್‌ನ ನನ್ನ ಸಮರ್ಪಿತ ತಂಡದ ನಿರಂತರ ಸಹಕಾರದೊಂದಿಗೆ, ಬೆಂಗಳೂರಿನ ಜನತೆಗೆ ಸುಗಮ ದೈನಂದಿನ ಸಂಚಾರಕ್ಕಾಗಿ ವಿಶ್ವಮಟ್ಟದ ಉಪನಗರ ರೈಲು ವ್ಯವಸ್ಥೆಯನ್ನು ನಿರ್ಮಿಸಿ, ನಗರ ಸಂಚಾರ, ಪ್ರಾದೇಶಿಕ ಸಂಪರ್ಕ ಹಾಗೂ ಮೂಲಸೌಕರ್ಯ ಅಭಿವೃದ್ಧಿಯಲ್ಲಿ ಹೊಸ ಅಧ್ಯಾಯವನ್ನು ಆರಂಭಿಸುವ ದೃಢ ಸಂಕಲ್ಪವನ್ನು ನಾವು ಹೊಂದಿದ್ದೇವೆ.

Suburban Rail Back on TRACK !
"Target clearly... Respond quickly... Act decisively... Coordinate seamlessly... Keep commitments"

Follow us on

ಬಿ.ಎಸ್.ಟಿ.ಪಿ. ಪ್ರೈಮ್

ಕೆಎಫ್‌ಡಬ್ಲ್ಯೂ & ಇಐಬಿ ಪ್ರಗತಿ ಪರಿಶೀಲನೆ







ಯುರೋಪಿಯನ್ ಇನ್ವೆಸ್ಟ್‌ಮೆಂಟ್ ಬ್ಯಾಂಕ್ (EIB), ಕೆಎಫ್‌ಡಬ್ಲ್ಯೂ ಡೆವಲಪ್‌ಮೆಂಟ್ ಬ್ಯಾಂಕ್ (KfW Development Bank) ಹಾಗೂ Deutsche Bahn (DB) ಪ್ರತಿನಿಧಿ ತಂಡವು 2026ರ ಜೂನ್ 9 ಮತ್ತು 10ರಂದು ನಿಧಿ ಪರಿಶೀಲನಾ (Funding Review) ಮಿಷನ್‌ನ ಅಂಗವಾಗಿ ಬೆಂಗಳೂರು ಉಪನಗರ ಸಾರಿಗೆ ಯೋಜನೆ (BSTP)ಗೆ ಭೇಟಿ ನೀಡಿತು.

ಪ್ರತಿನಿಧಿ ತಂಡವು ಕ–ರೈಡ್‌ನ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಲಕ್ಷ್ಮಣ್ ಸಿಂಗ್ ಅವರ ನೇತೃತ್ವದಲ್ಲಿ ಯೋಜನೆಯ ಪ್ರಗತಿ, ಹಣಕಾಸು ನೆರವು, ರೋಲಿಂಗ್ ಸ್ಟಾಕ್ ಖರೀದಿ, ಯೋಜನೆ ಅನುಷ್ಠಾನ ಹಾಗೂ ಪರಿಸರ ಮತ್ತು ಸಾಮಾಜಿಕ (Environmental & Social – E&S) ಉಪಕ್ರಮಗಳ ಕುರಿತು ಸಮಗ್ರ ಚರ್ಚೆ ನಡೆಸಿತು. ಇದೇ ಸಂದರ್ಭದಲ್ಲಿ, ಇತ್ತೀಚಿನ ಸಾಧನೆಗಳು ಹಾಗೂ ಪ್ರಮುಖ ಮೈಲಿಗಲ್ಲುಗಳನ್ನು ಒಳಗೊಂಡ ಸಂಪರ್ಕ–BSTP ಸುದ್ದಿಪತ್ರಿಕೆಯ 10ನೇ ಆವೃತ್ತಿಯನ್ನು ತಂಡಕ್ಕೆ ನೀಡಲಾಯಿತು.

ನಂತರ ಪ್ರತಿನಿಧಿ ತಂಡವು ಕಾರಿಡಾರ್–2ರ ಯಶವಂತಪುರ, ಶೆಟ್ಟಿಹಳ್ಳಿ ಹಾಗೂ ಮ್ಯಾದರಹಳ್ಳಿ ನಿಲ್ದಾಣಗಳಿಗೆ ಭೇಟಿ ನೀಡಿ, ನಿರ್ಮಾಣ ಕಾಮಗಾರಿಗಳ ಪ್ರಗತಿ ಹಾಗೂ ನಡೆಯುತ್ತಿರುವ ಕಾರ್ಯಗಳನ್ನು ಪರಿಶೀಲಿಸಿತು.

ಸಕಾರಾತ್ಮಕವಾಗಿ ಮುಕ್ತಾಯಗೊಂಡ ಈ ಭೇಟಿಯ ಅಂತ್ಯದಲ್ಲಿ, ನಿಧಿ ಒದಗಿಸುವ ಸಂಸ್ಥೆಗಳು ಕ–ರೈಡ್ ಸಾಧಿಸಿರುವ ಪ್ರಗತಿಯನ್ನು ಶ್ಲಾಘಿಸಿ, ಬೆಂಗಳೂರು ಉಪನಗರ ಸಾರಿಗೆ ಯೋಜನೆಯ ಯಶಸ್ವಿ ಅನುಷ್ಠಾನಕ್ಕೆ ತಮ್ಮ ನಿರಂತರ ಬೆಂಬಲವನ್ನು ಪುನರುಚ್ಚರಿಸಿವೆ.

ಪಿಎಂಜಿ ವತಿಯಿಂದ ಬೆಂಗಳೂರು ಉಪನಗರ ಸಾರಿಗೆ ಯೋಜನೆಯ ಪ್ರಗತಿ ಪರಿಶೀಲನೆ

ಕೇಂದ್ರ ಸಚಿವ ಸಂಪುಟ ಕಾರ್ಯದರ್ಶಿಯವರ ಅಧೀನದಲ್ಲಿ ಕಾರ್ಯನಿರ್ವಹಿಸುವ ಪ್ರಾಜೆಕ್ಟ್ ಮಾನಿಟರಿಂಗ್ ಗ್ರೂಪ್ (ಪಿಎಂಜಿ) ದೇಶದಾದ್ಯಂತ ಪ್ರಮುಖ ಮೂಲಸೌಕರ್ಯ ಯೋಜನೆಗಳ ಅನುಷ್ಠಾನದಲ್ಲಿರುವ ಅಡೆತಡೆಗಳನ್ನು ನಿವಾರಿಸಿ, ಅವುಗಳ ಅನುಷ್ಠಾನವನ್ನು ತ್ವರಿತಗೊಳಿಸುವ ಉದ್ದೇಶದಿಂದ ಸ್ಥಾಪಿಸಲಾದ ಸಾಂಸ್ಥಿಕ ವ್ಯವಸ್ಥೆಯಾಗಿದೆ.

ಬೆಂಗಳೂರು ಉಪನಗರ ಸಾರಿಗೆ ಯೋಜನೆಯ (BSTP) ಪ್ರಗತಿಯನ್ನು ಪರಿಶೀಲಿಸುವ ಹಾಗೂ ಪ್ರಸ್ತುತ ನಡೆಯುತ್ತಿರುವ ಕಾಮಗಾರಿಗಳು, ಯೋಜನೆಗೆ ಎದುರಾಗಿರುವ ಸವಾಲುಗಳು ಮತ್ತು ಯೋಜನೆಯನ್ನು ನಿಗದಿತ ಸಮಯದಲ್ಲಿ ಪೂರ್ಣಗೊಳಿಸಲು ಪರಿಣಾಮ ಬೀರುತ್ತಿರುವ ಅಂಶಗಳ ಸ್ಥಿತಿಗತಿಯನ್ನು ಅವಲೋಕಿಸಲು ಪಿಎಂಜಿ ತಂಡವು 2026ರ ಜೂನ್ 13 ರಂದು ಕ–ರೈಡ್‌ಗೆ ಭೇಟಿ ನೀಡಿತು.



ಕ–ರೈಡ್‌ನ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಲಕ್ಷ್ಮಣ್ ಸಿಂಗ್ ಪರಿಶೀಲನಾ ಸಭೆಯ ಅಧ್ಯಕ್ಷತೆಯನ್ನು ವಹಿಸಿ, ಯೋಜನೆಯ ಅಭಿವೃದ್ಧಿ ಮತ್ತು ಪ್ರಗತಿಯ ಕುರಿತು ಸಮಗ್ರ ಮಾಹಿತಿ ನೀಡಿದರು. ಯೋಜನೆಯ ವೇಳಾಪಟ್ಟಿಗೆ ಪರಿಣಾಮ ಬೀರುತ್ತಿರುವ ಸವಾಲುಗಳು, ಅವುಗಳನ್ನು ನಿವಾರಿಸಲು ಕೈಗೊಳ್ಳಲಾಗುತ್ತಿರುವ ಕ್ರಮಗಳು ಹಾಗೂ ಗೌರವಾನ್ವಿತ ಪ್ರಧಾನಮಂತ್ರಿಯವರ ಪ್ರಗತಿ (PRAGATI) ಪರಿಶೀಲನಾ ಸಭೆಯಲ್ಲಿ ನೀಡಲಾದ ಗುರಿಗಳನ್ನು ಸಾಧಿಸಲು ರೂಪಿಸಲಾದ ಕಾರ್ಯತಂತ್ರದ ಕುರಿತು ಅವರು ವಿವರಿಸಿದರು.



ಪುನರ್ವಸತಿ ಕಾರ್ಯಯೋಜನೆ (Resettlement Action Plan-RAP) ಅಡಿಯಲ್ಲಿ ಕೈಗೊಳ್ಳಲಾಗಿರುವ ಪರಿಸರ ಹಾಗೂ ಸಾಮಾಜಿಕ (Environmental & Social-E&S) ಉಪಕ್ರಮಗಳನ್ನು PMG ತಂಡವು ಶ್ಲಾಘಿಸಿತು. ಅಲ್ಲದೆ, ಈ ಉಪಕ್ರಮಗಳನ್ನು ಇತರ ಮೂಲಸೌಕರ್ಯ ಹಾಗೂ ಅಭಿವೃದ್ಧಿ ಯೋಜನೆಗಳಲ್ಲಿ ಅನುಸರಿಸಬಹುದಾದ ಮಾದರಿ ಅಧ್ಯಯನವಾಗಿ ದಾಖಲಿಸುವಂತೆ ಶಿಫಾರಸು ಮಾಡಿತು.

ಬಳಿಕ, ಪಿಎಂಜಿ ತಂಡವು ಕಾರಿಡಾರ್–2ರ ಯಶವಂತಪುರ ನಿಲ್ದಾಣದ ಕಾಮಗಾರಿ ಸ್ಥಳಕ್ಕೆ ಭೇಟಿ ನೀಡಿ, ಸ್ಥಳದಲ್ಲಿನ ಕಾಮಗಾರಿಗಳ ಪ್ರಗತಿ ಹಾಗೂ ಅನುಷ್ಠಾನದ ಸ್ಥಿತಿಯನ್ನು ಪರಿಶೀಲಿಸಿತು.

ಕರ್ನಾಟಕ ಸರ್ಕಾರದ ಮುಖ್ಯ ಕಾರ್ಯದರ್ಶಿ ಮತ್ತು ಕ–ರೈಡ್ ನಿರ್ದೇಶಕರ ಮಂಡಳಿಯಿಂದ 'ಸಂಪರ್ಕ' – ಮೇ 2026ರ ಸಂಚಿಕೆ ಅನಾವರಣ



'ಸಂಪರ್ಕ' ಸುದ್ದಿಪತ್ರದ ಮೇ 2026ರ ಸಂಚಿಕೆಯನ್ನು ಕರ್ನಾಟಕ ಸರ್ಕಾರದ ಮುಖ್ಯ ಕಾರ್ಯದರ್ಶಿಯವರು ಬಿಡುಗಡೆ ಮಾಡಿದರು. ಈ ಸಂಚಿಕೆಯನ್ನು ಕೆ–ರೈಡ್/ಬೈ–ರೈಡ್‌ನ ನಿರ್ದೇಶಕರ ಮಂಡಳಿಗೆ ಸಲ್ಲಿಸಲಾಯಿತು. ಇದರ ಮೂಲಕ ಯೋಜನೆಯ ಪ್ರಮುಖ ಪ್ರಗತಿ ವಿವರಗಳು ಹಾಗೂ ಸಂಸ್ಥೆಯಲ್ಲಿ ನಡೆಯುತ್ತಿರುವ ಪ್ರಮುಖ ಬೆಳವಣಿಗೆಗಳನ್ನು ಹಂಚಿಕೊಳ್ಳಲಾಯಿತು.

ಸುದ್ದಿ – ನೋಟ

ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರಾದ ಮಾನ್ಯ ಡಾ. ಎಂ.ಬಿ. ಪಾಟೀಲ್ ಅವರ ಅಧ್ಯಕ್ಷತೆಯಲ್ಲಿ ಬಿಎಸ್‌ಟಿಪಿ ಪ್ರಗತಿ ಪರಿಶೀಲನಾ ಸಭೆ

ಕರ್ನಾಟಕ ಸರ್ಕಾರದ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಕರ್ಯ ಅಭಿವೃದ್ಧಿ ಸಚಿವರಾದ ಮಾನ್ಯ ಡಾ. ಎಂ.ಬಿ. ಪಾಟೀಲ್ ಅವರು 2026ರ ಜೂನ್ 10ರಂದು ಬೆಂಗಳೂರಿನಲ್ಲಿ ಬೆಂಗಳೂರು ಉಪನಗರ ಸಾರಿಗೆ ಯೋಜನೆಯ ಕುರಿತು ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿದರು.

ಕ–ರೈಡ್‌ನ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಲಕ್ಷ್ಮಣ್ ಸಿಂಗ್ ಹಾಗೂ ಮೂಲಸೌಕರ್ಯ ಅಭಿವೃದ್ಧಿ ಇಲಾಖೆಯ ಕಾರ್ಯದರ್ಶಿಗಳಾದ ಡಾ. ವಿಶಾಲ್ ಆರ್., ಐಎಎಸ್ ಅವರು ಯೋಜನೆಯ ಒಟ್ಟಾರೆ ಪ್ರಗತಿ, ಪ್ರಸ್ತುತ ನಡೆಯುತ್ತಿರುವ ಕಾಮಗಾರಿಗಳ ಸ್ಥಿತಿ, ಭೂಸ್ವಾಧೀನ ಪ್ರಕ್ರಿಯೆಯಲ್ಲಿನ ಸವಾಲುಗಳು, ಯೋಜನೆಗೆ ಸಂಬಂಧಿಸಿದ ಹಣಕಾಸಿನ ಪರಿಣಾಮಗಳು ಹಾಗೂ ಯೋಜನೆಯ ಅನುಷ್ಠಾನವನ್ನು ತ್ವರಿತಗೊಳಿಸಲು ಕೈಗೊಳ್ಳಲಾಗುತ್ತಿರುವ ಕ್ರಮಗಳ ಕುರಿತು ಮಾನ್ಯ ಸಚಿವರಿಗೆ ಸಮಗ್ರ ಮಾಹಿತಿ ನೀಡಿದರು.



ಅರ್ಬನ್ ರೈಲ್ ಸೌತ್ 2026 ಸಮ್ಮೇಳನದಲ್ಲಿ ಕ–ರೈಡ್‌ನ ವ್ಯವಸ್ಥಾಪಕ ನಿರ್ದೇಶಕರಿಂದ ಕ–ರೈಡ್‌ನ ದೂರದೃಷ್ಟಿಯ ಪ್ರಸ್ತುತಿ



ಕ–ರೈಡ್‌ನ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಲಕ್ಷ್ಮಣ್ ಸಿಂಗ್ ಅವರು 2026ರ ಜೂನ್ 12ರಂದು ಬೆಂಗಳೂರಿನಲ್ಲಿ ಇಂಡಿಯನ್ ಇನ್‌ಫ್ರಾಸ್ಟ್ರಕ್ಚರ್ ಸಂಸ್ಥೆ ಆಯೋಜಿಸಿದ್ದ ಅರ್ಬನ್ ರೈಲ್ ಸೌತ್–2026: ನೆಟ್‌ವರ್ಕ್ ವಿಸ್ತರಣೆ ಮತ್ತು ಆಧುನೀಕರಣ ಸಮ್ಮೇಳನದ ಮೂರನೇ ಆವೃತ್ತಿಯಲ್ಲಿ "ಕಾರ್ಯತಂತ್ರದ ಆದಾಯ: ಬಹುಮಾದರಿ ಏಕೀಕರಣ (Multimodal Integration-MMI) ಮತ್ತು ಸಾರಿಗೆ–ಆಧಾರಿತ ಅಭಿವೃದ್ಧಿ (Transit-Oriented Development-TOD)" ವಿಷಯದ ಕುರಿತು ಉಪನ್ಯಾಸ ನೀಡಿದರು.

ತಮ್ಮ **"ಕ–ರೈಡ್‌ನ ದೃಷ್ಟಿಕೋನ–ಇದುವರೆಗಿನ ಪ್ರಗತಿ ಮತ್ತು ಭವಿಷ್ಯದ ಯೋಜನೆಗಳು"** ಎಂಬ ಪ್ರಸ್ತುತಿಯಲ್ಲಿ, ರೈಲು ಕಾರ್ಯಾಚರಣೆಗಳ ದಕ್ಷತೆಯನ್ನು ಹೆಚ್ಚಿಸುವುದು, ಆದಾಯ ಸೃಷ್ಟಿಯನ್ನು ಬಲಪಡಿಸುವುದು, ಕೃತಕ ಬುದ್ಧಿಮತ್ತೆ (AI) ಹಾಗೂ ದತ್ತಾಂಶ ವಿಶ್ಲೇಷಣೆಯ (Data Analytics) ಪರಿಣಾಮಕಾರಿ ಬಳಕೆಯನ್ನು ಉತ್ತೇಜಿಸುವುದು ಮತ್ತು ಯೋಜನೆಗಳಾದ್ಯಂತ ಸುಸ್ಥಿರ ಅಭಿವೃದ್ಧಿಗೆ ಆದ್ಯತೆ ನೀಡುವ ವಿವಿಧ ಉಪಕ್ರಮಗಳನ್ನು ಅವರು ವಿವರಿಸಿದರು.

ಬೆಂಗಳೂರು ನಗರ ಹಾಗೂ ಅದರ ಉಪನಗರ ಪ್ರದೇಶಗಳ ಹೆಚ್ಚುತ್ತಿರುವ ಸಂಚಾರ ಅಗತ್ಯಗಳನ್ನು ಸಮರ್ಥವಾಗಿ ಪೂರೈಸುವ ವಿಶ್ವದರ್ಜೆಯ ಉಪನಗರ ರೈಲು ಜಾಲವನ್ನು ನಿರ್ಮಿಸುವ ನಿಟ್ಟಿನಲ್ಲಿ ಕ–ರೈಡ್‌ನ ಬದ್ಧತೆಯನ್ನು ಅವರು ಪುನರುಚ್ಚರಿಸಿದರು.

ನೈಋತ್ಯ ರೈಲ್ವೆಯ ಸಿಎಒ(ನಿರ್ಮಾಣ) ರವರಿಂದ ಕ–ರೈಡ್‌ಗೆ ಭೇಟಿ



ನೈಋತ್ಯ ರೈಲ್ವೆ (SWR)ಯ ಮುಖ್ಯ ಆಡಳಿತಾಧಿಕಾರಿ (ನಿರ್ಮಾಣ) ಶ್ರೀ ಅಭಯ್ ಕುಮಾರ್ ಗುಪ್ತಾ ಅವರು ಕ–ರೈಡ್‌ನ ಕಾರ್ಪೊರೇಟ್ ಕಚೇರಿಗೆ ಭೇಟಿ ನೀಡಿದರು.

ಈ ಸಂದರ್ಭದಲ್ಲಿ, ಕ–ರೈಡ್‌ನ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಲಕ್ಷ್ಮಣ್ ಸಿಂಗ್ ಅವರು ಬಿಎಸ್‌ಟಿಪಿ ಹಾಗೂ ಪ್ರಗತಿಯಲ್ಲಿರುವ ರೈಲ್ವೆ ದ್ವಿಪಥೀಕರಣ ಯೋಜನೆಗಳ ಅನುಷ್ಠಾನ ಮತ್ತು ಪ್ರಗತಿಯ ಕುರಿತು ಅವರಿಗೆ ಸಮಗ್ರ ಮಾಹಿತಿ ನೀಡಿದರು.

ಎಕನಾಮಿಕ್ ಟೈಮ್ಸ್ ಇನ್‌ಫ್ರಾ ರೈಲ್ ಶೋ–2026ರಲ್ಲಿ ಕ–ರೈಡ್‌ನ ವ್ಯವಸ್ಥಾಪಕ ನಿರ್ದೇಶಕರಿಂದ ನಗರ ಸಾರಿಗೆಯ ಭವಿಷ್ಯ ರೂಪಿಸುವಲ್ಲಿ ಬಿಎಸ್‌ಟಿಪಿಯ ಪಾತ್ರದ ಪ್ರಸ್ತುತಿ



ಎಕನಾಮಿಕ್ ಟೈಮ್ಸ್ ವತಿಯಿಂದ 2026ರ ಜೂನ್ 18ರಂದು ನವದೆಹಲಿಯ ಹಯಾತ್ ರೀಜೆನ್ಸಿಯಲ್ಲಿ ಆಯೋಜಿಸಲಾದ ಐಟಿ ಇನ್‌ಫ್ರಾ ರೈಲ್ ಶೋ 2026 ಕಾರ್ಯಕ್ರಮಕ್ಕೆ ಕ–ರೈಡ್‌ನ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಲಕ್ಷ್ಮಣ್ ಸಿಂಗ್ ಅವರನ್ನು ಪ್ಯಾನಲ್ ಸದಸ್ಯರಾಗಿ ಆಹ್ವಾನಿಸಲಾಗಿತ್ತು. ಭಾರತದ ರೈಲು ಹಾಗೂ ನಗರ ಸಾರಿಗೆ ಕ್ಷೇತ್ರದ ಭವಿಷ್ಯದ ಕುರಿತು ಚರ್ಚಿಸಲು ನೀತಿ ರೂಪಿಸುವವರು, ರೈಲ್ವೆ ಅಧಿಕಾರಿಗಳು, ಮೆಟ್ರೋ ನಿಗಮಗಳು, ಮೂಲಸೌಕರ್ಯ ಕ್ಷೇತ್ರದ ನಾಯಕರು ಮತ್ತು ಹೂಡಿಕೆದಾರರನ್ನು ಒಗ್ಗೂಡಿಸಿದ ಪ್ರತಿಷ್ಠಿತ ಕೈಗಾರಿಕಾ ವೇದಿಕೆಯಾಗಿತ್ತು.

"ನಗರ ರೈಲು ಅಭಿವೃದ್ಧಿ–ಮೆಟ್ರೋ ವಿಸ್ತರಣೆ, ಟ್ರಾನ್ಸಿಟ್ ಓರಿಯೆಂಟೆಡ್ ಡೆವಲಪ್‌ಮೆಂಟ್ (TOD), ಸಾರ್ವಜನಿಕ–ಖಾಸಗಿ ಸಹಭಾಗಿತ್ವ (PPP) ಹಾಗೂ ಬಹುಮಾದರಿ ಸಾರಿಗೆ ಏಕೀಕರಣ" ವಿಷಯದ ಪ್ಯಾನಲ್ ಚರ್ಚೆಯಲ್ಲಿ ಭಾಗವಹಿಸಿದ ವ್ಯವಸ್ಥಾಪಕ ನಿರ್ದೇಶಕರು, ಬಿಎಸ್‌ಟಿಪಿ ಪ್ರಾದೇಶಿಕ ಸಂಪರ್ಕವನ್ನು ಬಲಪಡಿಸುವುದು, ಸುಸ್ಥಿರ ಸಾರಿಗೆ ವ್ಯವಸ್ಥೆ, ಬಹುಮಾದರಿ ಸಾರಿಗೆ ಏಕೀಕರಣ ಹಾಗೂ ಟ್ರಾನ್ಸಿಟ್ ಓರಿಯೆಂಟೆಡ್ ಡೆವಲಪ್‌ಮೆಂಟ್ (TOD) ಮೂಲಕ ನಗರ ಸಾರಿಗೆಯನ್ನು ಪರಿವರ್ತಿಸುವಲ್ಲಿ ವಹಿಸುತ್ತಿರುವ ಮಹತ್ವದ ಪಾತ್ರವನ್ನು ವಿವರಿಸಿದರು.

ಇದೇ ಸಂದರ್ಭದಲ್ಲಿ, ಪ್ರಯಾಣಿಕ–ಕೇಂದ್ರಿತ ಹಾಗೂ ಭವಿಷ್ಯೋನ್ಮುಖ ಸಾರ್ವಜನಿಕ ಸಾರಿಗೆ ವ್ಯವಸ್ಥೆಯನ್ನು ನಿರ್ಮಿಸಲು ಏಕೀಕೃತ ಟಿಕೆಟಿಂಗ್ ವ್ಯವಸ್ಥೆ (Unified Ticketing), ಮೊದಲ ಮತ್ತು ಕೊನೆಯ ಮೈಲು (First & Last Mile) ಸಂಪರ್ಕದ ನಿರಂತರತೆ ಹಾಗೂ ಸ್ಮಾರ್ಟ್ ಮೂಲಸೌಕರ್ಯದ ಅಗತ್ಯವನ್ನು ಅವರು ಒತ್ತಿಹೇಳಿದರು.

ಈ ಚರ್ಚೆಯಲ್ಲಿ ಮೆಟ್ರೋ, RRTS ಹಾಗೂ ಉಪನಗರ ರೈಲು ಜಾಲದ ವಿಸ್ತರಣೆ, ಸಾರ್ವಜನಿಕ–ಖಾಸಗಿ ಸಹಭಾಗಿತ್ವ (PPP), ಹೂಡಿಕೆ ಅವಕಾಶಗಳು ಮತ್ತು ಏಕೀಕೃತ ಸಾರಿಗೆ ಪರಿಹಾರಗಳು ಸೇರಿದಂತೆ ಪ್ರಮುಖ ವಿಷಯಗಳನ್ನು ವಿಶ್ಲೇಷಿಸಲಾಯಿತು. ಜೊತೆಗೆ, ಭಾರತದ ನಗರಗಳಲ್ಲಿ ಸುಸ್ಥಿರ, ನವೀನ ಮತ್ತು ಪ್ರಯಾಣಿಕ–ಕೇಂದ್ರಿತ ಸಾರಿಗೆ ಜಾಲಗಳನ್ನು ನಿರ್ಮಿಸಲು ಅನುಸರಿಸಬೇಕಾದ ಕಾರ್ಯತಂತ್ರಗಳ ಕುರಿತು ಚರ್ಚಿಸಲಾಯಿತು.



ನವದೆಹಲಿಯಲ್ಲಿ ನಡೆದ 7ನೇ ರೈಲ್ ಮೆಟ್ರೋಟೆಕ್ ಕಾನ್‌ಕ್ಲೇವ್ 2026ರಲ್ಲಿ ಬೆಂಗಳೂರಿನ ಉಪನಗರ ಸಾರಿಗೆ ದೂರದೃಷ್ಟಿಯನ್ನು ಅನಾವರಣಗೊಳಿಸಿದ ಕ–ರೈಡ್



2026ರ ಜುಲೈ 22ರಿಂದ 24ರವರೆಗೆ ನವದೆಹಲಿಯ ಭಾರತ್ ಮಂಡಪಂನಲ್ಲಿ ನಡೆದ ಪ್ರತಿಷ್ಠಿತ 7ನೇ ರೈಲ್ ಮೆಟ್ರೋಟೆಕ್ ಕಾನ್‌ಕ್ಲೇವ್ ಮತ್ತು ಎಕ್ಸ್‌ಪೋ ಇಂಡಿಯಾ 2026ರಲ್ಲಿ ಭಾಗವಹಿಸಲು ಕ–ರೈಡ್‌ಗೆ ಆಹ್ವಾನ ನೀಡಲಾಗಿತ್ತು. ಈ ಸಮಾವೇಶದಲ್ಲಿ ಭಾರತದಲ್ಲಿನ ರೈಲು ಹಾಗೂ ಮೆಟ್ರೋ ಸಾರಿಗೆಯ ಭವಿಷ್ಯದ ಕುರಿತು ಚರ್ಚಿಸಲು ನೀತಿ ರೂಪಿಸುವವರು, ರೈಲ್ವೆ ತಜ್ಞರು, ತಂತ್ರಜ್ಞಾನ ಪೂರೈಕೆದಾರರು, ತಂತ್ರಜ್ಞಾನ ಬಳಕೆದಾರರು, ಕೈಗಾರಿಕಾ ನಾಯಕರು ಹಾಗೂ ಅಂತರರಾಷ್ಟ್ರೀಯ ಪಾಲುದಾರರು ಒಂದೇ ವೇದಿಕೆಯಲ್ಲಿ ಸೇರಿದ್ದರು. ಕ–ರೈಡ್ ನಿಯೋಗವನ್ನು ವ್ಯವಸ್ಥಾಪಕ ನಿರ್ದೇಶಕರು, ಪ್ರಧಾನ ವ್ಯವಸ್ಥಾಪಕರು (SEMU) ಹಾಗೂ ಇತರ ಹಿರಿಯ ಅಧಿಕಾರಿಗಳು ಮುನ್ನಡೆಸಿದರು. ಈ ಕಾರ್ಯಕ್ರಮವು ಬಿಎಸ್‌ಟಿಪಿಯ ಪ್ರಗತಿ ಹಾಗೂ ಬೆಂಗಳೂರಿಗಾಗಿ ಆಧುನಿಕ, ಸುಸ್ಥಿರ ಮತ್ತು ಸಮಗ್ರ ನಗರ ರೈಲು ಜಾಲವನ್ನು ಅಭಿವೃದ್ಧಿಪಡಿಸುವ ಕ–ರೈಡ್‌ನ ಬದ್ಧತೆಯನ್ನು ಪ್ರದರ್ಶಿಸಲು ಮಹತ್ವದ ವೇದಿಕೆಯನ್ನು ಒದಗಿಸಿತು.

ಈ ಸಮಾವೇಶದ ಪ್ರಮುಖ ಆಕರ್ಷಣೆಯಾಗಿ **"ಭಾರತದಲ್ಲಿನ ರೈಲು ಯೋಜನೆಗಳು: ಭಾರತದಲ್ಲಿ ಜಾಗತಿಕ ಸಾಮರ್ಥ್ಯ ನಿರ್ಮಾಣ"** ಎಂಬ ವಿಷಯದ ಪ್ಯಾನಲ್ ಚರ್ಚೆಯಲ್ಲಿ ಕ–ರೈಡ್‌ನ ವ್ಯವಸ್ಥಾಪಕ ನಿರ್ದೇಶಕರು ಪ್ಯಾನಲ್ ಸದಸ್ಯರಾಗಿ ಭಾಗವಹಿಸಿದರು. ಚರ್ಚೆಯ ವೇಳೆ ಅವರು ಬೆಂಗಳೂರು ಉಪನಗರ ಸಾರಿಗೆ ಯೋಜನೆಯ ಇತ್ತೀಚಿನ ಪ್ರಗತಿ, ನಾಲ್ಕು ಕಾರಿಡಾರ್‌ಗಳಲ್ಲಿ ಹಂತ ಹಂತವಾಗಿ ಯೋಜನೆಯನ್ನು ಜಾರಿಗೊಳಿಸುವ ಕಾರ್ಯತಂತ್ರ ಹಾಗೂ ಬೆಂಗಳೂರಿನ ನಗರ ದಟ್ಟಣೆಯನ್ನು ಕಡಿಮೆ ಮಾಡುವ ಉದ್ದೇಶದಿಂದ ಬಹುಮಾದರಿ ಸಾರಿಗೆ ಸಂಪರ್ಕ ವೃದ್ಧಿಸುವಲ್ಲಿ ಈ ಯೋಜನೆ ವಹಿಸಲಿರುವ ಪರಿವರ್ತನಾತ್ಮಕ ಪಾತ್ರದ ಕುರಿತು ತಮ್ಮ ಅಭಿಪ್ರಾಯಗಳನ್ನು ಹಂಚಿಕೊಂಡರು.

ಪ್ಯಾನಲ್ ಚರ್ಚೆಯಲ್ಲಿ ಭಾರತ ಸರ್ಕಾರದ "ವಿಕಸಿತ ಭಾರತ್ 2047" ದೃಷ್ಟಿಕೋನದ ಹಿನ್ನೆಲೆಯಲ್ಲಿ ದೇಶದ ರೈಲು ಮೂಲಸೌಕರ್ಯದ ಭವಿಷ್ಯದ ಕುರಿತು ಸಮಗ್ರ ಚರ್ಚೆ ನಡೆಯಿತು. ಸುಧಾರಿತ ತಂತ್ರಜ್ಞಾನಗಳ ಅಳವಡಿಕೆ, ಡಿಜಿಟಲ್ ಪರಿವರ್ತನೆ, ಕೃತಕ ಬುದ್ಧಿಮತ್ತೆ ಸ್ಮಾರ್ಟ್ ಮೊಬಿಲಿಟಿ ಪರಿಹಾರಗಳು ಹಾಗೂ ಇಂಡಸ್ಟ್ರಿ 4.0 ಆವಿಷ್ಕಾರಗಳು ಮುಂದಿನ ವರ್ಷಗಳಲ್ಲಿ ಭಾರತದ ರೈಲು ವ್ಯವಸ್ಥೆಯನ್ನು ಹೇಗೆ ರೂಪಾಂತರಗೊಳಿಸಲಿವೆ ಎಂಬ ವಿಷಯಗಳ ಕುರಿತು ವಿಶೇಷವಾಗಿ ಚರ್ಚಿಸಲಾಯಿತು.

ಪ್ರೀಮಿಯಂ ಸ್ಟಾಲ್ ಪ್ರದರ್ಶಕರಾಗಿ ಭಾಗವಹಿಸಿದ್ದ ಕ–ರೈಡ್, ವಿಷಯಾಧಾರಿತ ಪ್ರದರ್ಶನ ಫಲಕಗಳ ಮೂಲಕ ಬಿಎಸ್‌ಟಿಪಿಯ ಸಾಧನೆಗಳು ಮತ್ತು ಪ್ರಮುಖ ವೈಶಿಷ್ಟ್ಯಗಳನ್ನು ಅನಾವರಣಗೊಳಿಸಿತು. ಈ ಪ್ರದರ್ಶನದಲ್ಲಿ ಯೋಜನೆಯ ಪ್ರಮುಖ ಅಂಶಗಳು, ವಿಶೇಷ ಲಕ್ಷಣಗಳು ಹಾಗೂ ವಿನ್ಯಾಸ ಅಭಿವೃದ್ಧಿಯಲ್ಲಿ ಅಳವಡಿಸಿಕೊಂಡಿರುವ ನವೀನ ವಿಧಾನಗಳನ್ನು ಪರಿಚಯಿಸಲಾಯಿತು. ಕ–ರೈಡ್‌ನ ಪ್ರದರ್ಶನ ಮಳಿಗೆಯು ಸರ್ಕಾರಿ ಸಂಸ್ಥೆಗಳು, ಕೈಗಾರಿಕಾ ತಜ್ಞರು, ತಂತ್ರಜ್ಞಾನ ಪೂರೈಕೆದಾರರು, ಸಲಹೆಗಾರರು ಹಾಗೂ ಮೂಲಸೌಕರ್ಯ ಅಭಿವೃದ್ಧಿಪಡಿಸುವ ಸಂಸ್ಥೆಗಳ ಗಮನ ಸೆಳೆಯಿತು. ಇದರಿಂದ ರೈಲು ಕ್ಷೇತ್ರದಲ್ಲಿ ಜ್ಞಾನ ವಿನಿಮಯ ಹಾಗೂ ಭವಿಷ್ಯದ ಸಹಯೋಗಗಳಿಗೆ ಉತ್ತಮ ಅವಕಾಶಗಳು ಸೃಷ್ಟಿಯಾದವು.



7ನೇ ರೈಲ್ ಮೆಟ್ರೋಟೆಕ್ ಕಾನ್‌ಕ್ಲೇವ್ ಸೇರಿದಂತೆ ರಾಷ್ಟ್ರೀಯ ಮಟ್ಟದ ವೇದಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸುವ ಮೂಲಕ, ಆರ್ಥಿಕ ಬೆಳವಣಿಗೆಗೆ ಪೂರಕವಾಗಿರುವ, ಸುಸ್ಥಿರ ನಗರ ಹಾಗೂ ಉಪನಗರ ಅಭಿವೃದ್ಧಿಯನ್ನು ಉತ್ತೇಜಿಸುವ, ಜನಕೇಂದ್ರಿತ ಮತ್ತು ಭವಿಷ್ಯ ಸನ್ನದ್ಧ ಸಾರಿಗೆ ಜಾಲಗಳನ್ನು ನಿರ್ಮಿಸುವ ಭಾರತದ ದೃಷ್ಟಿಕೋನಕ್ಕೆ ಕ–ರೈಡ್ ತನ್ನ ನಿರಂತರ ಕೊಡುಗೆಯನ್ನು ನೀಡುತ್ತಿದೆ.







ಭೇಟಿ ಮತ್ತು ಪರಿಶೀಲನೆಗಳು

ಕಾರಿಡಾರ್ – 2 ಬಿ





2026ರ ಜೂನ್ 8 ಹಾಗೂ ಜುಲೈ 27ರಂದು, ಕ–ರೈಡ್‌ನ ವ್ಯವಸ್ಥಾಪಕ ನಿರ್ದೇಶಕರು "ಕಾರಿಡಾರ್–2ಬಿ (ಮಲ್ಲಿಗೆ ಮಾರ್ಗ)"ಯ ಚಿಕ್ಕಬಾಣಾವರದಿಂದ ಯಶವಂತಪುರದವರೆಗೆ ನಡೆಯುತ್ತಿರುವ ನಿಲ್ದಾಣ ಮತ್ತು ಅಲೈನ್‌ಮೆಂಟ್ ಪ್ಯಾಕೇಜುಗಳ ಕಾಮಗಾರಿಯ ಪ್ರಗತಿಯನ್ನು ಪರಿಶೀಲಿಸಿದರು. ಈ ಸಂದರ್ಭದಲ್ಲಿ ನಿಲ್ದಾಣ ಬಾಕ್ಸ್ ನಿರ್ಮಾಣ, ವಯಾಡಕ್ಟ್ ಪೋರ್ಟಲ್ ಪಿಯರ್‌ಗಳ ನಿರ್ಮಾಣ, ಅಲೈನ್‌ಮೆಂಟ್ ಕಾಮಗಾರಿ ಹಾಗೂ ರೈಲ್ವೆ ಅಂಡರ್ ಬ್ರಿಡ್ಜ್ ಕಾಮಗಾರಿಗಳ ಪ್ರಗತಿಯನ್ನು ಅವಲೋಕಿಸಲಾಯಿತು. ಪರಿಶೀಲನೆಯ ವೇಳೆ ಪಾದಚಾರಿ ಮೇಲ್ಸೇತುವೆ ಹಾಗೂ ಪ್ರವೇಶ/ನಿರ್ಗಮನ ವ್ಯವಸ್ಥೆಗಳನ್ನು ಅಂತಿಮಗೊಳಿಸುವುದು, ಸಂಪನ್ಮೂಲಗಳ ಸಮರ್ಪಕ ನಿಯೋಜನೆಯನ್ನು ಬಲಪಡಿಸುವುದು, ಭಾರತೀಯ ರೈಲ್ವೆ ಹಳಿಗಳ ಸಮೀಪ ಕಟ್ಟುನಿಟ್ಟಿನ ಸುರಕ್ಷತಾ ಕ್ರಮಗಳನ್ನು ಪಾಲಿಸುವುದು ಹಾಗೂ ಸೋಲದೇವನಹಳ್ಳಿ ಡಿಪೋ ಸಂಪರ್ಕ ಮಾರ್ಗಕ್ಕಾಗಿ ಭೂಸ್ವಾಧೀನ ಪ್ರಕ್ರಿಯೆಯನ್ನು ತ್ವರಿತಗೊಳಿಸುವಂತೆ ವ್ಯವಸ್ಥಾಪಕ ನಿರ್ದೇಶಕರು ಅಧಿಕಾರಿಗಳಿಗೆ ಸೂಚನೆ ನೀಡಿದರು. ಇದೇ ಸಂದರ್ಭದಲ್ಲಿ, ಯಶವಂತಪುರ ನಿಲ್ದಾಣದ ನಿರ್ಮಾಣ ಕಾಮಗಾರಿಯ ಪ್ರಗತಿಯನ್ನು ಪರಿಶೀಲಿಸಿದ ಅವರು, ಯೋಜನೆಯ ನಿಗದಿತ ವೇಳಾಪಟ್ಟಿಯನ್ನು ಕಟ್ಟುನಿಟ್ಟಾಗಿ ಪಾಲಿಸುವ ನಿಟ್ಟಿನಲ್ಲಿ ಪ್ರಮುಖ ಸಮಸ್ಯೆಗಳನ್ನು ತಕ್ಷಣವೇ ಪರಿಹರಿಸುವಂತೆ ಗುತ್ತಿಗೆದಾರರಿಗೆ ನಿರ್ದೇಶನ ನೀಡಿದರು. ಈ ಪರಿಶೀಲನೆಯಲ್ಲಿ ಕ–ರೈಡ್‌ನ ಹಿರಿಯ ಅಧಿಕಾರಿಗಳು, ಜನರಲ್ ಕನ್ಸಲ್ಟೆಂಟ್, M/s CEMINDIA ಹಾಗೂ M/s PJB Engineer ಸಂಸ್ಥೆಗಳ ಪ್ರತಿನಿಧಿಗಳು ಉಪಸ್ಥಿತರಿದ್ದರು.

ಕಾರಿಡಾರ್ – 4 ಎ & ದ್ವಿಪಥೀಕರಣ ಯೋಜನೆ



ಕ–ರೈಡ್‌ನ ಶ್ರೀ ರಾಜೇಶ್ ಕುಮಾರ್ ಸಿಂಗ್, ನಿರ್ದೇಶಕರು (ಪ್ರಾಜೆಕ್ಟ್ಸ್&ಪ್ಲಾನಿಂಗ್) ರವರು ಬಿಎಸ್‌ಟಿಪಿಯ ಕಾರಿಡಾರ್–4, ಪ್ಯಾಕೇಜ್–ಎ (ಹೀಲಲಿಗೆ–ಕಗ್ಗದಾಸಪುರ) ಹಾಗೂ ಬೈಯಪ್ಪನಹಳ್ಳಿ–ಹೊಸೂರು (48 ಕಿ.ಮೀ.) ದ್ವಿಪಥೀಕರಣ ಯೋಜನೆ ಕಾಮಗಾರಿಯ ಪ್ರಗತಿಯನ್ನು ಪರಿಶೀಲಿಸಿದರು.

ಪರಿಶೀಲನೆಯ ಸಂದರ್ಭದಲ್ಲಿ ನಿಲ್ದಾಣ ಕಾಮಗಾರಿಗಳ ಪ್ರಗತಿ, ಯೋಜನೆಯ ಪ್ರಮುಖ ಮೈಲಿಗಲ್ಲುಗಳು, ನಿರ್ಮಾಣ ಸಾಮಗ್ರಿಗಳ ಅನುಮೋದನೆ ಹಾಗೂ ಸುರಕ್ಷತಾ ಮಾನದಂಡಗಳ ಪಾಲನೆಯನ್ನು ಪರಿಶೀಲಿಸಲಾಯಿತು. ಅಲ್ಲದೆ, ಟ್ರ್ಯಾಕ್ಷನ್ ವ್ಯವಸ್ಥೆ ಮತ್ತು ನಿಲ್ದಾಣ ಮೂಲಸೌಕರ್ಯಕ್ಕಾಗಿ ವಿದ್ಯುತ್ ಪೂರೈಕೆಯ ವ್ಯವಸ್ಥೆಗಳನ್ನೂ ಪರಿಶೀಲಿಸಲಾಯಿತು.

ದ್ವಿಪಥೀಕರಣ ಯೋಜನೆಯ ಪ್ರಮುಖ ಪ್ರಗತಿಗಳಲ್ಲಿ ಲೆವೆಲ್ ಕ್ರಾಸಿಂಗ್ ಸಂಖ್ಯೆ 104ರ ಕಾರ್ಯಾರಂಭ, ಲೆವೆಲ್ ಕ್ರಾಸಿಂಗ್ ಸಂಖ್ಯೆ 109ರ ಕಾರ್ಯಾರಂಭಕ್ಕೆ ನಡೆಯುತ್ತಿರುವ ಸಿದ್ಧತೆಗಳು, ಅನೇಕಲ್ ರಸ್ತೆ ನಿಲ್ದಾಣದ ಪ್ಲಾಟ್‌ಫಾರ್ಮ್ ಸಂಖ್ಯೆ 1ರ ಕಾಮಗಾರಿ ಪೂರ್ಣಗೊಂಡಿರುವುದು, ನಿಲ್ದಾಣ ಕಟ್ಟಡ ಮತ್ತು ಸಂಚಾರ ಪ್ರದೇಶದ ನಿರ್ಮಾಣ ಕಾಮಗಾರಿ, ಮುಂಗಾರು ಅವಧಿಯ ಗಿಡ ನೆಡುವ ಯೋಜನೆ ಹಾಗೂ ರಾಷ್ಟ್ರೀಯ ಹೆದ್ದಾರಿ ರೈಲ್ವೆ ಅಂಡರ್ ಬ್ರಿಡ್ಜ್ ಸಂಖ್ಯೆ 470ರ ಕಾಮಗಾರಿಯ ಪ್ರಗತಿಯನ್ನು ಪರಿಶೀಲಿಸಲಾಯಿತು. ಈ ಪರಿಶೀಲನೆಯಲ್ಲಿ ಕ–ರೈಡ್‌ನ ಹಿರಿಯ ಅಧಿಕಾರಿಗಳು ಹಾಗೂ ಗುತ್ತಿಗೆದಾರರು ಉಪಸ್ಥಿತರಿದ್ದರು.

ಕಾರಿಡಾರ್ – 2 ಎ





2026ರ ಜುಲೈ 4ರಂದು, ಕ–ರೈಡ್‌ನ ವ್ಯವಸ್ಥಾಪಕ ನಿರ್ದೇಶಕರು ಬಿಎಸ್‌ಟಿಪಿಯ ಕಾರಿಡಾರ್–2ಎ (ಮಲ್ಲಿಗೆ ಮಾರ್ಗ) ಅಡಿಯಲ್ಲಿ ಹೆಬ್ಬಾಳದಿಂದ ಕಸ್ತೂರಿನಗರದವರೆಗೆ ನಡೆಯುತ್ತಿರುವ ಸ್ಟೇಷನ್ ಪ್ಯಾಕೇಜ್–2 ಕಾಮಗಾರಿಯ ಪ್ರಗತಿಯನ್ನು ಪರಿಶೀಲಿಸಿದರು.

ಪರಿಶೀಲನೆಯ ಸಂದರ್ಭದಲ್ಲಿ ನಡೆಯುತ್ತಿರುವ ವಿವಿಧ ನಿರ್ಮಾಣ ಕಾಮಗಾರಿಗಳನ್ನು ಅವಲೋಕಿಸಿದ ವ್ಯವಸ್ಥಾಪಕ ನಿರ್ದೇಶಕರು, ಬಾಕಿ ಉಳಿದಿರುವ ವಿನ್ಯಾಸ ನಕ್ಷೆಗಳನ್ನು ಶೀಘ್ರ ಸಲ್ಲಿಸುವಂತೆ ಹಾಗೂ ಯೋಜನೆಯ ಸಂಪೂರ್ಣ ವ್ಯಾಪ್ತಿಯಲ್ಲಿ ಏಕಕಾಲದಲ್ಲಿ ಕಾಮಗಾರಿಗಳನ್ನು ಕೈಗೊಳ್ಳುವ ಮೂಲಕ ಯೋಜನೆಯ ಅನುಷ್ಠಾನವನ್ನು ವೇಗಗೊಳಿಸುವಂತೆ ಯೋಜನಾ ತಂಡಕ್ಕೆ ನಿರ್ದೇಶನ ನೀಡಿದರು.

ಸುರಕ್ಷತೆಗೆ ಹೆಚ್ಚಿನ ಆದ್ಯತೆ ನೀಡಿದ ಅವರು, ಭಾರತೀಯ ರೈಲ್ವೆ (IR) ಹಳಿಗಳ ಪಕ್ಕದಲ್ಲಿ ನಡೆಯುವ ಕಾಮಗಾರಿಗಳ ವೇಳೆ ಕಟ್ಟುನಿಟ್ಟಿನ ಸುರಕ್ಷತಾ ಕ್ರಮಗಳನ್ನು ಪಾಲಿಸುವಂತೆ ಸೂಚಿಸಿದರು. ಯೋಜನೆಯ ನಿಗದಿತ ವೇಳಾಪಟ್ಟಿಯನ್ನು ಅನುಸರಿಸಲು ಅಗತ್ಯವಿರುವಷ್ಟು ಮಾನವ ಸಂಪನ್ಮೂಲ, ಯಂತ್ರೋಪಕರಣಗಳು, ನಿರ್ಮಾಣ ಸಾಮಗ್ರಿಗಳು ಹಾಗೂ ಇತರೆ ಸಂಪನ್ಮೂಲಗಳನ್ನು ಸಮರ್ಪಕವಾಗಿ ನಿಯೋಜಿಸುವಂತೆ ಗುತ್ತಿಗೆದಾರರಿಗೆ ನಿರ್ದೇಶನ ನೀಡಿದರು. ಜೊತೆಗೆ, ಅನುಮೋದಿತ ಗುರಿಗಳಿಗೆ ಅನುಗುಣವಾಗಿ ನಿಲ್ದಾಣದ ಪೋರ್ಟಲ್ ಬೀಮ್‌ಗಳು ಹಾಗೂ ಗರ್ಡರ್‌ಗಳ ಕಾಸ್ಟಿಂಗ್ ಕಾಮಗಾರಿಯನ್ನು ತ್ವರಿತಗೊಳಿಸುವಂತೆ ಸೂಚಿಸಿದರು.

ಪರಿಶೀಲನೆಯ ಭಾಗವಾಗಿ ಸಿಗ್ನಲಿಂಗ್ ಮತ್ತು ದೂರಸಂಪರ್ಕ (S&T) ಕಾಮಗಾರಿಗಳ ಪ್ರಗತಿಯನ್ನೂ ಅವಲೋಕಿಸಿದ ಅವರು, ಹೆಬ್ಬಾಳ–ಬಾಣಸವಾಡಿ ವಿಭಾಗದ ಲೆವೆಲ್ ಕ್ರಾಸಿಂಗ್ (LC) ಗೇಟ್ ಸಂಖ್ಯೆ 144A, 144, 143, 142, 141 ಹಾಗೂ 140ರಲ್ಲಿ ಎಂಜಿನಿಯರಿಂಗ್ ಆಪರೇಷನಲ್ ಲೆವೆಲ್ ಬ್ಯಾರಿಯರ್‌ಗಳ (EOLBs) ಕಾರ್ಯಾರಂಭವನ್ನು ಶೀಘ್ರಗೊಳಿಸುವಂತೆ ಮಹಾಪ್ರಬಂಧಕರು (S&T) ಅವರಿಗೆ ನಿರ್ದೇಶನ ನೀಡಿದರು.

ಅದೇ ರೀತಿ, ಯೋಜನೆಯ ಕಾಮಗಾರಿಗಳು ಸುಗಮವಾಗಿ ಸಾಗಲು LC ಗೇಟ್ ಸಂಖ್ಯೆ 144A, 142, 141 ಹಾಗೂ 140ರ ಗೇಟ್ ಲಾಡ್ಜ್‌ಗಳನ್ನು ಶೀಘ್ರ ಸ್ಥಳಾಂತರಿಸುವ ಅಗತ್ಯವಿದೆ ಎಂ ದು ವಿವರಿಸಿದರು. ಈ ವೇಳೆ ಪ್ರಭಾರ ಮಹಾಪ್ರಬಂಧಕರು (S&T), LC ಗೇಟ್ ಸಂಖ್ಯೆ 144A ಅನ್ನು 2026ರ ಜುಲೈ 20ರಂದು ಕಾರ್ಯಾರಂಭಗೊಳಿಸಲು ಯೋಜಿಸಲಾಗಿದೆ ಹಾಗೂ ಉಳಿದ ಗೇಟ್‌ಗಳನ್ನು ಅದರ ನಂತರದ ಎರಡು ವಾರಗಳೊಳಗೆ ಕಾರ್ಯಾರಂಭಗೊಳಿಸುವ ಗುರಿ ಹೊಂದಲಾಗಿದೆ ಎಂದು ಮಾಹಿತಿ ನೀಡಿದರು.

ಈ ಪರಿಶೀಲನೆಯಲ್ಲಿ ಕ–ರೈಡ್‌ನ ಹಿರಿಯ ಅಧಿಕಾರಿಗಳು, ಜನರಲ್ ಕನ್ಸಲ್ಟೆಂಟ್ (GC), M/s. NCC ಹಾಗೂ M/s PJB Engineers ಸಂಸ್ಥೆಗಳ ಪ್ರತಿನಿಧಿಗಳು ಉಪಸ್ಥಿತರಿದ್ದರು.

ಮುಖ್ಯಾಂಶಗಳು ಮತ್ತು ಮೈಲಿಗಲ್ಲುಗಳು

ಕ–ರೈಡ್ / ಬಿ–ರೈಡ್ ವತಿಯಿಂದ ಸೋಲದೇವನಹಳ್ಳಿ ರೈಲು ನಿರ್ವಹಣಾ ಡಿಪೋಗಾಗಿ ಟೆಂಡರ್ ಆಹ್ವಾನ

ಬಿ–ರೈಡ್ ಸೋಲದೇವನಹಳ್ಳಿ ರೈಲು ನಿರ್ವಹಣಾ ಡಿಪೋ ನಿರ್ಮಾಣಕ್ಕಾಗಿ ರೂ. 200.03 ಕೋಟಿ (ಜಿಎಸ್‌ಟಿ ಹೊರತುಪಡಿಸಿ) ಅಂದಾಜು ವೆಚ್ಚದಲ್ಲಿ ಟೆಂಡರ್ ಆಹ್ವಾನಿಸಿದೆ. ಈ ಟೆಂಡರ್ ಸಲ್ಲಿಕೆಗೆ ಕೊನೆಯ ದಿನಾಂಕ 12.08.2026 ಆಗಿದೆ.

ಉಪನಗರ ರೈಲು ಸೇವೆಗಳ ಸುಗಮ ಕಾರ್ಯಾಚರಣೆಗೆ ರೈಲು ನಿರ್ವಹಣಾ ಡಿಪೋ ಅತ್ಯಂತ ಅವಶ್ಯಕ ಮತ್ತು ಪ್ರಮುಖ ಮೂಲಸೌಕರ್ಯವಾಗಿದೆ. ಇದು ವರ್ಕ್‌ಶಾಪ್ ಮಾದರಿಯಲ್ಲಿ ಕಾರ್ಯನಿರ್ವಹಿಸಿ, ರೈಲು ಬೋಗಿಗಳು ಹಾಗೂ ರೋಲಿಂಗ್ ಸ್ಟಾಕ್‌ಗಳ ನಿಯಮಿತ ನಿರ್ವಹಣೆಯನ್ನು ಕೈಗೊಂಡು, ಸುರಕ್ಷಿತ ಹಾಗೂ ವಿಶ್ವಾಸಾರ್ಹ ರೈಲು ಸಂಚಾರವನ್ನು ಖಚಿತಪಡಿಸುತ್ತದೆ. ಈ ಸೌಲಭ್ಯವಿಲ್ಲದೆ ಉಪನಗರ ರೈಲು ವ್ಯವಸ್ಥೆಯನ್ನು ಅದರ ಉದ್ದೇಶಿತ ಸಾಮರ್ಥ್ಯದಲ್ಲಿ ಕಾರ್ಯನಿರ್ವಹಿಸಲು ಸಾಧ್ಯವಿಲ್ಲ.

ಸೋಲದೇವನಹಳ್ಳಿ ನಿರ್ವಹಣಾ ಡಿಪೋವನ್ನು ಚಿಕ್ಕಬಾಣಾವರ ಉಪನಗರ ರೈಲು ನಿಲ್ದಾಣದ ಸಮೀಪ ನಿರ್ಮಿಸಲು ಯೋಜಿಸಲಾಗಿದೆ. ಈ ಡಿಪೋವು ಕಾರಿಡಾರ್–2 ಮತ್ತು ಕಾರಿಡಾರ್–4 ರೋಲಿಂಗ್ ಸ್ಟಾಕ್‌ಗಳ ಕಾರ್ಯಾಚರಣೆ ಹಾಗೂ ನಿರ್ವಹಣೆಯ ಉದ್ದೇಶವನ್ನು ಪೂರೈಸಲಿದೆ.

ಈ ಹಿಂದೆ, ಡಿಪೋ ನಿರ್ಮಾಣಕ್ಕಾಗಿ 26 ಎಕರೆ ಖಾಸಗಿ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲಾಗಿದೆ. ಡಿಪೋದಲ್ಲಿ ಸ್ಟೇಬ್ಲಿಂಗ್ ಲೈನ್‌ಗಳು, ವರ್ಕ್‌ಶಾಪ್ ಲೈನ್‌ಗಳು, ತಪಾಸಣಾ ಬೇ ದುರಸ್ತಿ ಬೇ ಸ್ವಯಂಚಾಲಿತ ಕೋಚ್ ತೊಳೆಯುವ ಘಟಕ ಸೇರಿದಂತೆ ವಿವಿಧ ಆಧುನಿಕ ಸೌಲಭ್ಯಗಳನ್ನು ನಿರ್ಮಿಸಲಾಗುತ್ತದೆ.

ಬಿ–ರೈಡ್‌ನ ನೆಟ್–ಜೀರೋ ಕಾರ್ಬನ್ ನೀತಿಗೆ ಅನುಗುಣವಾಗಿ, ನೈಸರ್ಗಿಕ ಸಂಪನ್ಮೂಲಗಳ ಸದ್ಬಳಕೆಯನ್ನು ಉತ್ತೇಜಿಸುವ ಉದ್ದೇಶದಿಂದ ಡಿಪೋದಲ್ಲಿ ಸೌರ ವಿದ್ಯುತ್ ವ್ಯವಸ್ಥೆ ಹಾಗೂ ಮಳೆನೀರು ಸಂಗ್ರಹಣೆ) ವ್ಯವಸ್ಥೆಯನ್ನು ಅಳವಡಿಸಲಾಗುತ್ತದೆ.

ಈ ಡಿಪೋ ನಿರ್ಮಾಣ ಕಾಮಗಾರಿಗೆ ಜರ್ಮನಿಯ KfWಡೆವಲಪ್‌ಮೆಂಟ್ ಬ್ಯಾಂಕ್ ಮಂಜೂರು ಮಾಡಿದ ಸಾಲದ ನೆರವಿನಿಂದ ಹಣಕಾಸು ಒದಗಿಸಲಾಗುತ್ತದೆ.

ರೈಲ್ವೇ ದ್ವಿಪಥೀಕರಣ ಯೋಜನೆಗಾಗಿ 8–ಚಕ್ರಗಳ ಡೀಸೆಲ್–ಎಲಕ್ಟ್ರಿಕ್ ಟವರ್ ಕಾರ್ ಅನ್ನು ಪೂರೈಸಲಿರುವ ಕ–ರೈಡ್



ಕ–ರೈಡ್ ತನ್ನ ಯಶವಂತಪುರ (YPR)–ಹೊಸೂರು (HSRA) ರೈಲು ಡಬ್ಲಿಂಗ್ ಯೋಜನೆಯ ಭಾಗವಾಗಿ, ಎಸ್‌ಬಿಸಿ (SBC) ವಿಭಾಗದ ಎಸ್‌ಜಿಟಿ (SGT) ಯಾರ್ಡ್‌ನಲ್ಲಿ 8–ಚಕ್ರಗಳ ಡೀಸೆಲ್–ಎಲೆಕ್ಟ್ರಿಕ್ ಟವರ್ ಕಾರ್ ಅನ್ನು ಯಶಸ್ವಿಯಾಗಿ ಇಳಿಸಿದೆ.

ಈ ವಿಶೇಷ ನಿರ್ವಹಣಾ ವಾಹನವನ್ನು ಓವರ್‌ಹೆಡ್ ಎಕ್ವಿಪ್‌ಮೆಂಟ್ (OHE) ಕಾಮಗಾರಿಗಳನ್ನು ಶೀಘ್ರವಾಗಿ ಕಾರ್ಯಾರಂಭಗೊಳಿಸಲು ಹಾಗೂ ವಿದ್ಯುದೀಕೃತ ರೈಲು ಜಾಲದ ಕಾರ್ಯಾಚರಣೆ ಮತ್ತು ನಿರ್ವಹಣಾ ಸಾಮರ್ಥ್ಯವನ್ನು ಮತ್ತಷ್ಟು ಬಲಪಡಿಸುವ ಉದ್ದೇಶದಿಂದ ಖರೀದಿಸಲಾಗಿದೆ. ಪ್ರಸ್ತುತ ಇದರ ಕಮಿಷನಿಂಗ್ ಕಾರ್ಯಗಳು ಪ್ರಗತಿಯಲ್ಲಿದ್ದು, ಶೀಘ್ರದಲ್ಲೇ ಟವರ್ ಕಾರ್ ಅನ್ನು ಸೇವೆಗೆ ನಿಯೋಜಿಸಲಾಗುವುದು.

ಈ ಟವರ್ ಕಾರ್ ಹೊಸ ಓವರ್‌ಹೆಡ್ ಎಕ್ವಿಪ್‌ಮೆಂಟ್ (OHE) ಕಾಮಗಾರಿಗಳ ಕಮಿಷನಿಂಗ್ ಹಾಗೂ 25 ಕಿ.ವಿ. ಎಸಿ ಟ್ರಾಕ್ಷನ್ ಓವರ್‌ಹೆಡ್ ಎಕ್ವಿಪ್‌ಮೆಂಟ್ ವ್ಯವಸ್ಥೆಯ ನಿರ್ವಹಣೆಯಲ್ಲಿ ಮಹತ್ವದ ಪಾತ್ರ ವಹಿಸಲಿದೆ. ಕೇಟೆನರಿ (Catenary) ಮತ್ತು ಕಾಂಟ್ಯಾಕ್ಟ್ ವೈರ್‌ಗಳು (Contact Wires) ಸೇರಿದಂತೆ ಓವರ್‌ಹೆಡ್ ಟ್ರಾಕ್ಷನ್ ಮೂಲಸೌಕರ್ಯದ ನಿಯಮಿತ ಗಸ್ತು, ಪರಿಶೀಲನೆ ಹಾಗೂ ನಿರ್ವಹಣಾ ಕಾರ್ಯಗಳಿಗೆ ಇದನ್ನು ಬಳಸಲಾಗುತ್ತದೆ. ಇದರಿಂದ ರೈಲು ಸಂಚಾರದ ವಿಶ್ವಾಸಾರ್ಹತೆ, ಸುರಕ್ಷತೆ ಮತ್ತು ಕಾರ್ಯಕ್ಷಮತೆ ಮತ್ತಷ್ಟು ಹೆಚ್ಚಲಿದೆ.

ಈ ಅತ್ಯಾಧುನಿಕ ನಿರ್ವಹಣಾ ವಾಹನದ ಸೇರ್ಪಡೆಯು ರೈಲು ಮೂಲಸೌಕರ್ಯದ ಆಧುನೀಕರಣ, ಕಾರ್ಯಾಚರಣೆಯ ದಕ್ಷತೆ ವೃದ್ಧಿ ಹಾಗೂ ತನ್ನ ಯೋಜನಾ ಕಾರಿಡಾರ್‌ಗಳಲ್ಲಿ ಸುರಕ್ಷಿತ, ವಿಶ್ವಾಸಾರ್ಹ ಮತ್ತು ಸುಸ್ಥಿರ ರೈಲು ಸೇವೆಗಳನ್ನು ಒದಗಿಸುವ ಕ–ರೈಡ್‌ನ ಬದ್ಧತೆಯ ಮತ್ತೊಂದು ಮಹತ್ವದ ಮೈಲಿಗಲ್ಲಾಗಿದೆ.

ಕಾಮಗಾರಿಗಳ ಪ್ರಗತಿ

ಕಾರಿಡಾರ್–2ಎ ನಿಲ್ದಾಣ ಪ್ಯಾಕೇಜ್

ಪ್ಯಾಕೇಜ್–ಸಿ2ಎ: ಬಿಎಸ್‌ಟಿಪಿಯ ಕಾರಿಡಾರ್–2 ಅಡಿಯಲ್ಲಿ ಬೆನ್ನಿಗಾನಹಳ್ಳಿ, ಕಸ್ತೂರಿ ನಗರ, ಸೇವಾ ನಗರ, ಬಾಣಸವಾಡಿ, ನಾಗವಾರ, ಕನಕನಗರ, ಹೆಬ್ಬಾಳ ಮತ್ತು ಮತ್ತಿಕೆರೆ ಪ್ರದೇಶಗಳಲ್ಲಿ ಒಟ್ಟು 08 ನಿಲ್ದಾಣಗಳ ನಿರ್ಮಾಣ ಕಾಮಗಾರಿ. ಇದರಲ್ಲಿ 01 ಎಲಿವೇಟೆಡ್ ಇಂಟರ್‌ಚೇಂಜ್ ನಿಲ್ದಾಣ, 03 ಎಲಿವೇಟೆಡ್ ನಿಲ್ದಾಣಗಳು ಹಾಗೂ 04 ನೆಲಮಟ್ಟದ ನಿಲ್ದಾಣಗಳು ಒಳಗೊಂಡಿವೆ.

ಈ ಕಾಮಗಾರಿಯ ವ್ಯಾಪ್ತಿಯಲ್ಲಿ ಸಿವಿಲ್ ಮತ್ತು ಸಂರಚನಾ ಕಾಮಗಾರಿಗಳು, ಪ್ರವೇಶ/ನಿರ್ಗಮನ ರಚನೆಗಳು, ಉಕ್ಕಿನ ಫುಟ್ ಓವರ್ ಬ್ರಿಡ್ಜ್ ಮೇಲ್ಛಾವಣಿ ರಚನೆಗಳು, ಪೂರ್ವ–ಇಂಜಿನಿಯರ್ಡ್ ಕಟ್ಟಡ (PEB) ಕಾಮಗಾರಿಗಳು, ವಾಸ್ತುಶಿಲ್ಪದ ಅಂತಿಮ ಕಾಮಗಾರಿಗಳು (Architectural Finishes), ಪ್ಲಂಬಿಂಗ್, ಮುಂಭಾಗದ ವಿನ್ಯಾಸ, ವಿದ್ಯುತ್ ಹಾಗೂ ಯಾಂತ್ರಿಕ (E&M) ಕಾಮಗಾರಿಗಳು, ವಿವರವಾದ ವಿನ್ಯಾಸ ಮತ್ತು ಇಂಜಿನಿಯರಿಂಗ್ (Detailed Design & Engineering - DDC) ಸೇರಿದಂತೆ ಎಲ್ಲಾ ಸಂಬಂಧಿತ ಕಾಮಗಾರಿಗಳು ಒಳಗೊಂಡಿವೆ.

ಈ ಕಾಮಗಾರಿಯ ಒಪ್ಪಂದವನ್ನು 31.12.2024 ರಂದು M/s. NCC Limited ಸಂಸ್ಥೆಯೊಂದಿಗೆ ಎಲ್ಲಾ ತೆರಿಗೆಗಳು ಮತ್ತು ಜಿಎಸ್‌ಟಿ ಸೇರಿದಂತೆ ರೂ. 501.25 ಕೋಟಿ ಮೊತ್ತಕ್ಕೆ ಸಹಿ ಮಾಡಲಾಗಿದೆ.

ಈ ಪ್ಯಾಕೇಜ್‌ನ ಕಾಮಗಾರಿ ಪೂರ್ಣಗೊಳಿಸಲು ನಿಗದಿಪಡಿಸಿರುವ ಅವಧಿ 24 ತಿಂಗಳುಗಳು ಆಗಿದೆ.

ಕಸ್ತೂರಿನಗರ ನಿಲ್ದಾಣ

ವಿವರ	ಪ್ರಾಥಮಿಕ ಕೆಲಸಗಳು	ರ‍್ಯಾಫ್ಟ್ ಪಿಸಿಸಿ	ರ‍್ಯಾಫ್ಟ್ ಆರ್‌ಸಿಸಿ	ಪಿಯರ್	ಪೋರ್ಟಲ್ ಬೀಮ್	ಸ್ಟೇಷನ್ ವಾಲ್
ವ್ಯಾಪ್ತಿ	205	205	205	26	13	820
ಪೂರ್ಣಗೊಂಡಿರುವುದು	205	205	205	26	07	133
ಪೂರ್ಣಗೊಂಡ %	100%	100%	100%	100%	53.84%	16.22%



ಪೋರ್ಟಲ್ ಬೀಮ್ ರೀನ್‌ಫೋರ್ಸ್‌ಮೆಂಟ್ ಬೆಂಡಿಂಗ್ ಕಾಮಗಾರಿ ಪ್ರಗತಿಯಲ್ಲಿದೆ.



ಪಿ4 ಮತ್ತು ಪಿ5 ಪೋರ್ಟಲ್ ಬೀಮ್‌ಗಳ ಕಾಂಕ್ರೀಟೀಕರಣ ಪೂರ್ಣಗೊಂಡಿದೆ.

ಬಾಣಸವಾಡಿ ನಿಲ್ದಾಣ

ವಿವರ	ಪ್ರಾಥಮಿಕ ಕೆಲಸಗಳು	ರ‍್ಯಾಫ್ಟ್ ಪಿಸಿಸಿ	ರ‍್ಯಾಫ್ಟ್ ಆರ್‌ಸಿಸಿ	ಬೇಸ್‌ಮೆಂಟ್ ಸ್ಲ್ಯಾಬ್	ಪಿಯರ್	ಪೋರ್ಟಲ್ ಬೀಮ್
ವ್ಯಾಪ್ತಿ	205	205	205	102.5	26	13
ಪೂರ್ಣಗೊಂಡಿರುವುದು	205	100	79.5	45	10	0
ಪೂರ್ಣಗೊಂಡ %	100%	49%	38.7%	43.9%	38.4%	0%



ಬೇಸ್‌ಮೆಂಟ್ ರೀಬಾರ್ ಕಾಮಗಾರಿ ಪ್ರಗತಿಯಲ್ಲಿದೆ.



ಬಾಣಸವಾಡಿ ನಿಲ್ದಾಣದ ವೈಮಾನಿಕ ನೋಟ

ಹೆಬ್ಬಾಳ ನಿಲ್ದಾಣ

ವಿವರ	ಪ್ರಾಥಮಿಕ ಕೆಲಸಗಳು	ರ‍್ಯಾಫ್ಟ್ ಪಿಸಿಸಿ	ರ‍್ಯಾಫ್ಟ್ ಆರ್‌ಸಿಸಿ	ಪಿಯರ್
ವ್ಯಾಪ್ತಿ	205	205	205	26
ಪೂರ್ಣಗೊಂಡಿರುವುದು	205	165	149	0
ಪೂರ್ಣಗೊಂಡ %	100%	80%	72.7%	0%



ತಡೆಗೋಡೆ ನಿರ್ಮಾಣಕ್ಕಾಗಿ ಅಗೆಯುವ ಕಾಮಗಾರಿ



ಹೆಬ್ಬಾಳ ನಿಲ್ದಾಣದ ವೈಮಾನಿಕ ನೋಟ

ಸೇವಾನಗರ ನಿಲ್ದಾಣ

ವಿವರ	ಪ್ರಾಥಮಿಕ ಕೆಲಸಗಳು	ರ‍್ಯಾಫ್ಟ್ ಪಿಸಿಸಿ	ರ‍್ಯಾಫ್ಟ್ ಆರ್‌ಸಿಸಿ	ಪಿಯರ್
ವ್ಯಾಪ್ತಿ	205	205	205	205
ಪೂರ್ಣಗೊಂಡಿರುವುದು	140	70	0	0
ಪೂರ್ಣಗೊಂಡ %	68.3%	34%	0%	0%



ಸ್ಟೇಷನ್ ರಾಫ್ಟ್ ಅಡಿಪಾಯಕ್ಕಾಗಿ ಅಗೆಯುವ ಕಾಮಗಾರಿ



ಸ್ಟೇಷನ್ ಪಿಸಿಸಿ ಕಾಮಗಾರಿ ಪ್ರಗತಿಯಲ್ಲಿದೆ

ಕಾರಿಡಾರ್–2ಬಿ ನಿಲ್ದಾಣ ಪ್ಯಾಕೇಜ್

ಕಾರಿಡಾರ್–2ಬಿ ಪ್ಯಾಕೇಜ್ ಅಡಿಯಲ್ಲಿ ಯಶವಂತಪುರ, ಶೆಟ್ಟಿಹಳ್ಳಿ, ಮ್ಯಾದರಹಳ್ಳಿ ಮತ್ತು ಚಿಕ್ಕಬಾಣಾವರ ಪ್ರದೇಶಗಳಲ್ಲಿ ಒಟ್ಟು 04 ಬಿಎಸ್‌ಟಿಪಿ ನಿಲ್ದಾಣಗಳ ನಿರ್ಮಾಣ ಕಾಮಗಾರಿ ಕೈಗೊಳ್ಳಲಾಗುತ್ತಿದೆ. ಇದರಲ್ಲಿ 01 ಎಲಿವೇಟೆಡ್ ನಿಲ್ದಾಣ, 01 ಎಲಿವೇಟೆಡ್ ಇಂಟರ್‌ಚೇಂಜ್ ನಿಲ್ದಾಣ ಹಾಗೂ 02 ನೆಲಮಟ್ಟದ ನಿಲ್ದಾಣಗಳು ಸೇರಿವೆ.

ಇದಲ್ಲದೆ, ಸುಮಾರು 500 ಮೀಟರ್ ಉದ್ದದ ಎಲಿವೇಟೆಡ್ ವಯಾಡಕ್ಟ್ ಹಾಗೂ ಸೋಲದೇವನಹಳ್ಳಿ ನಿರ್ವಹಣಾ ಡಿಪೋದ ಕಡೆಗೆ ಇಳಿಜಾರು ರ‍್ಯಾಂಪ್ (Down Ramp) ನಿರ್ಮಾಣವೂ ಈ ಪ್ಯಾಕೇಜ್‌ನ ಭಾಗವಾಗಿದೆ. ಈ ಕಾಮಗಾರಿಯ ವ್ಯಾಪ್ತಿಯಲ್ಲಿ ಸಿವಿಲ್ ಮತ್ತು ಸ್ಟ್ರಕ್ಚರಲ್ ಕಾಮಗಾರಿಗಳು, ಪ್ರವೇಶ/ನಿರ್ಗಮನ ರಚನೆಗಳು, ಉಕ್ಕಿನ ಫುಟ್ ಓವರ್ ಬ್ರಿಡ್ಜ್, ಮೇಲ್ಛಾವಣಿ ರಚನೆಗಳು, ಪೂರ್ವ–ಇಂಜಿನಿಯರ್ಡ್ ಕಟ್ಟಡ ಕಾಮಗಾರಿಗಳು, ಆರ್ಕಿಟೆಕ್ಚರಲ್ ಅಂತಿಮ ಕಾಮಗಾರಿಗಳು ಪ್ಲಂಬಿಂಗ್, ಮುಂಭಾಗದ ವಿನ್ಯಾಸ, ವಿದ್ಯುತ್ ಮತ್ತು ಯಾಂತ್ರಿಕ (E&M) ಕಾಮಗಾರಿಗಳು, ವಿವರವಾದ ವಿನ್ಯಾಸ ಮತ್ತು ಇಂಜಿನಿಯರಿಂಗ್ (Detailed Design & Engineering – DDC) ಸೇರಿದಂತೆ ಎಲ್ಲಾ ಸಂಬಂಧಿತ ಕಾಮಗಾರಿಗಳು ಒಳಗೊಂಡಿವೆ.

ಈ ಕಾಮಗಾರಿಯ ಒಪ್ಪಂದವನ್ನು 23.04.2025 ರಂದು ಮೆ। ಐಟಿಡಿ ಸಿಮೆಂಟೇಶನ್ ಇಂಡಿಯಾ ಲಿಮಿಟೆಡ್ (ಪ್ರಸ್ತುತ ಮೆ। ಸೆಮಿಂಡಿಯಾ ಪ್ರಾಜೆಕ್ಟ್ಸ್ ಲಿಮಿಟೆಡ್) ಸಂಸ್ಥೆಯೊಂದಿಗೆ ಎಲ್ಲಾ ತೆರಿಗೆಗಳು ಮತ್ತು ಜಿಎಸ್‌ಟಿ ಸೇರಿದಂತೆ ರೂ. 525.52 ಕೋಟಿ ಮೊತ್ತಕ್ಕೆ ಮಾಡಲಾಗಿದೆ. ಈ ಪ್ಯಾಕೇಜ್‌ನ ಕಾಮಗಾರಿ ಪೂರ್ಣಗೊಳಿಸಲು ನಿಗದಿಪಡಿಸಿರುವ ಅವಧಿ 24 ತಿಂಗಳುಗಳು ಆಗಿದೆ.

ಯಶವಂತಪುರ ನಿಲ್ದಾಣ (ಸಿ2 ಹಾಗೂ ಸಿ1 ಕಾರಿಡಾರ್‌ಗಳ ಎಲಿವೇಟೆಡ್ ಇಂಟರ್‌ಚೇಂಜ್ ನಿಲ್ದಾಣ)

ವಿವರ	ಪ್ರಾಥಮಿಕ ಕೆಲಸಗಳು(ಆರ್‌ಎಂಟಿ)	ಡಿ.ವಾಲ್ (ಸಂಖ್ಯೆ)	ಬ್ಯಾರೆಟ್ ಕಾಲಮ್ (ಸಂಖ್ಯೆ)	ನೆಲಮಹಡಿ ಸ್ಲ್ಯಾಬ್ (ಆರ್‌ಎಂಟಿ)	ಪೂರ್ಣಗೊಂಡ ಬೇಸ್‌ಮೆಂಟ್–1 ಸ್ಲ್ಯಾಬ್ (ಆರ್‌ಎಂಟಿ)	ಕಾಲಮ್–ಜಿಎಲ್‌ನಿಂದ ಸಿಸಿಎಲ್‌ವರೆಗೆ (ಸಂಖ್ಯೆ)	ಕಾನ್‌ಕೋರ್ಸ್ ಫ್ಲೋರ್ ಸ್ಲ್ಯಾಬ್ (ಆರ್‌ಎಂಟಿ)
ವ್ಯಾಪ್ತಿ	205	108	55	205	205	93	205
ಪೂರ್ಣಗೊಂಡಿರುವುದು	205	95	49	153	138	45	45
ಪೂರ್ಣಗೊಂಡ %	100%	87.96%	89.09%	74.63%	67.31%	48.38%	21.95%



ಬೆಸ್‌ಮೆಂಟ್–02 ಗ್ರಿಡ್ 03–04 ರ ಉತ್ಖನನ ಕಾಮಗಾರಿ



ಬ್ಯಾರೆಟ್ ಸಿ–76 ಪ್ಯಾನೆಲ್ ಗ್ಯಾಬಿಂಗ್ ಹಾಗೂ ಕೇಜ್ ಇಳಿಸುವ ಕಾಮಗಾರಿ ಪ್ರಗತಿಯಲ್ಲಿದೆ



ಸಿ–76 ಬ್ಯಾರೆಟ್ ಪ್ಯಾನೆಲ್ ಕೇಜ್ ಫ್ಯಾಬ್ರಿಕೇಷನ್ ಕಾಮಗಾರಿ

ಶೆಟ್ಟಿಹಳ್ಳಿ ನಿಲ್ದಾಣ (ಅಟ್-ಗ್ರೇಡ್ ನಿಲ್ದಾಣ)

ವಿವರ	ಪ್ರಾಥಮಿಕ ಕೆಲಸಗಳು(ಆರ್‌ಎಂಟಿ)	ಪೂರ್ಣಗೊಂಡ ನೆಲಮಹಡಿ ರ‍್ಯಾಫ್ಟ್ (ಆರ್‌ಎಂಟಿ)	ರಿಟೈನಿಂಗ್ ಗೋಡೆ (ಆರ್‌ಎಂಟಿ)	ಕಾಲಮ್-ಜಿಎಫ್‌ನಿಂದ ಸಿಎಲ್‌ವರೆಗೆ (ಸಂಖ್ಯೆ)	ಪ್ಲಾಟ್‌ಫಾರಂ ಗೋಡೆ (ಆರ್‌ಎಂಟಿ)	ಕಾನ್‌ಕೋರ್ಸ್ ಸ್ಲಾಬ್ (ಆರ್‌ಎಂಟಿ)
ವ್ಯಾಪ್ತಿ	205	205	205	32	615	205
ಪೂರ್ಣಗೊಂಡಿರುವುದು	205	205	119	14	301	0
ಪೂರ್ಣಗೊಂಡ %	100%	100%	58.04%	43.75%	49%	0%



ಗ್ರಿಡ್ ಸಂಖ್ಯೆ 1-3 ರಲ್ಲಿ ಸಿಸಿಎಲ್ ಹಾಗೂ ಪೋರ್ಟಲ್ ಬೀಮ್‌ನ ರಿಎನ್‌ಫೋರ್ಸ್‌ಮೆಂಟ್ ಕಟ್ಟುವ ಕಾಮಗಾರಿ ಪ್ರಗತಿಯಲ್ಲಿದೆ.



ಗ್ರಿಡ್ 05 ರಿಂದ 06 ರವರೆಗೆ ರಿಟೈನಿಂಗ್ ವಾಲ್‌ನ 2ನೇ ಲಿಫ್ಟ್ ಕಾಂಕ್ರೀಟ್ ಕಾಮಗಾರಿ ಪ್ರಗತಿಯಲ್ಲಿದೆ.

ಮ್ಯಾದರಹಳ್ಳಿ ನಿಲ್ದಾಣ (MYD)(ಅಟ್-ಗ್ರೇಡ್ ನಿಲ್ದಾಣ)

ವಿವರ	ಪ್ರಾಥಮಿಕ ಕೆಲಸಗಳು(ಆರ್‌ಎಂಟಿ)	ಪೂರ್ಣಗೊಂಡ ನೆಲಮಹಡಿ ರ‍್ಯಾಫ್ಟ್ (ಆರ್‌ಎಂಟಿ)	ರಿಟೈನಿಂಗ್ ಗೋಡೆ (ಆರ್‌ಎಂಟಿ)	ಕಾಲಮ್-ಜಿಎಫ್‌ಎಲ್‌ನಿಂದ ಸಿಎಲ್‌ವರೆಗೆ (ಸಂಖ್ಯೆ)	ಪ್ಲಾಟ್‌ಫಾರಂ ಗೋಡೆ (ಆರ್‌ಎಂಟಿ)	ಕಂಬೈನ್ಡ್ ಫೂಟಿಂಗ್ (ಸಂಖ್ಯೆ)	ಕಾಲಮ್-ಪಿಎಫ್‌ನಿಂದ ಟಿಎಲ್‌ವರೆಗೆ (ಸಂಖ್ಯೆ)	ಕಾನ್‌ಕೋರ್ಸ್ ಸ್ಲಾಬ್ (ಆರ್‌ಎಂಟಿ)
ವ್ಯಾಪ್ತಿ	205	93.12	205	32	558	7	14	205
ಪೂರ್ಣಗೊಂಡಿರುವುದು	205	93.12	190	10	500	7	14	29.3
ಪೂರ್ಣಗೊಂಡ %	100%	100%	92.68%	31%	41%	100%	100%	14.29%



ಗ್ರಿಡ್ 11 ರಿಂದ 13 ರ ನಡುವಿನ ಕಾನ್‌ಕೋರ್ಸ್ ಸ್ಲಾಬ್ ಕಾಂಕ್ರೀಟಿಂಗ್ ಕಾಮಗಾರಿ ಪ್ರಗತಿಯಲ್ಲಿದೆ.



ಗ್ರಿಡ್ 05 ರಿಂದ 08 ರ ನಡುವೆ MYD ಪೋರ್ಟಲ್ ಬೀಮ್‌ನ ಸ್ಟೇಜಿಂಗ್ ಮತ್ತು ಶಟರಿಂಗ್ ಕಾಮಗಾರಿ ಪ್ರಗತಿಯಲ್ಲಿದೆ.

ಚಿಕ್ಕಬಾಣಾವರ ನಿಲ್ದಾಣ (ಎಲಿವೇಟೆಡ್ ನಿಲ್ದಾಣ)

ವಿವರ	ಪ್ರಾಥಮಿಕ ಕೆಲಸಗಳು(ಆರ್‌ಎಂಟಿ)	ಪೂರ್ಣಗೊಂಡ ನೆಲಮಹಡಿ ರ‍್ಯಾಫ್ಟ್ (ಆರ್‌ಎಂಟಿ)	ಕಾಲಮ್-ನೆಲಮಹಡಿಯಿಂದ ಕಾನ್‌ಕೋರ್ಸ್‌ವರೆಗೆ (ಸಂಖ್ಯೆ)	ಪಿಯರ್ ಆರ್ಮ್(ಸಂಖ್ಯೆ)	ಪೈಲ್ (ಸಂಖ್ಯೆ)
ವ್ಯಾಪ್ತಿ	205	205	11	10	20
ಪೂರ್ಣಗೊಂಡಿರುವುದು	205	119.6	08	03	20
ಪೂರ್ಣಗೊಂಡ %	100%	58.34%	72.72%	30%	100%



ಗ್ರಿಡ್ 2-3ರ ಜಿ-3 ಐ-ಗರ್ಡರ್ ಅಳವಡಿಕೆ



ಗ್ರಿಡ್ 7-8ರಲ್ಲಿ ರಾಫ್ಟ್ ಕಾಂಕ್ರೀಟ್ ಎರಕದ ಕಾಮಗಾರಿ



ಎಸ್‌ಪಿ-06 ಆರ್‌ಹೆಚ್‌ಎಸ್/03 ಪೈಲ್ ಬೋರಿಂಗ್ ಕಾಮಗಾರಿ

ಚಿಕ್ಕಬಾಣಾವರದಿಂದ ಸೋಲದೇವನಹಳ್ಳಿ ಡಿಪೋವರೆಗೆ 625 ಮೀ. ಉದ್ದದ ವಯಾಡಕ್ಟ್

ವಿವರ	ಪೈಲ್	ಪೈಲ್ ಕ್ಯಾಪ್	ಪಿಯರ್	ಪಿಯರ್ ಕ್ಯಾಪ್
ವ್ಯಾಪ್ತಿ	120	28	28	15
ಪೂರ್ಣಗೊಂಡಿರುವುದು	96	11	11	6
ಪೂರ್ಣಗೊಂಡ %	80%	39.28%	39.28%	40%



ಪಿ 12 ಪಿಯರ್ ಕಾಂಕ್ರೀಟ್ ಕಾಮಗಾರಿ



ಪಿ7 ಪಿಯರ್ ಕ್ಯಾಪ್‌ನ ರಿನ್‌ಫೋರ್ಸ್‌ಮೆಂಟ್ ಟೈಯಿಂಗ್ ಕಾಮಗಾರಿ

ಕ್ಯಾಸ್ಟಿಂಗ್ ಯಾರ್ಡ್

ವಿವರ	ಪ್ರಾಥಮಿಕ ಕೆಲಸಗಳು
ವ್ಯಾಪ್ತಿ	120
ಪೂರ್ಣಗೊಂಡಿರುವುದು	37
ಪೂರ್ಣಗೊಂಡ %	30.83%



ಪಿ9–ಪಿ10 ನಡುವಿನ ಜಿ4 ಐ–ಗರ್ಡರ್‌ನ ಕಾಂಕ್ರೀಟ್ ಎರಕದ ಕಾಮಗಾರಿ ಆರಂಭಗೊಂಡಿದೆ



ಐ–ಗರ್ಡರ್ ಕಾಸ್ಟಿಂಗ್ ಯಾರ್ಡ್‌ನಿಂದ ರವಾನೆಯಾಗಿದೆ



ಪಿ7–ಪಿ8 ಸ್ಪಾನ್‌ನ ಜಿ2 ಗರ್ಡರ್‌ನ ರೀನ್‌ಫೋರ್ಸ್‌ಮೆಂಟ್ ಹಾಗೂ ಪ್ರೊಫೈಲಿಂಗ್ ಪರಿಶೀಲನೆ ಪೂರ್ಣಗೊಂಡಿದೆ

ಕಾರಿಡಾರ್–2 ಪ್ಯಾಕೇಜ್–2

ಬಿಎಸ್‌ಟಿಪಿ ಕಾರಿಡಾರ್‌ನ 11.569 ಕಿ.ಮೀ ಉದ್ದದ ನೆಲಮಟ್ಟದ ವಿಭಾಗಕ್ಕಾಗಿ (ಚೈನೇಜ್ –0.964 ರಿಂದ –0.675,–0.050 ರಿಂದ 4.700 ಮತ್ತು 4.700 ರಿಂದ 11.230 ಕಿ.ಮೀ ವರೆಗೆ) ಹಾಗೂ IR ಕಾರಿಡಾರ್‌ಗಾಗಿ (ಚೈನೇಜ್ 4.700 ರಿಂದ 10.280 ಕಿ.ಮೀ – ಸುಮಾರು 6.10 ಕಿ.ಮೀ) ಈ ಕೆಳಗಿನ ಕಾಮಗಾರಿಗಳ ವಿನ್ಯಾಸ ಮತ್ತು ನಿರ್ಮಾಣ: embankment ಮತ್ತು ಕಟಿಂಗ್‌ಗಳಲ್ಲಿನ ರಚನೆ (ಬ್ಲಾಂಕೆಟಿಂಗ್ ಸೇರಿದಂತೆ), ಪ್ರಮುಖ ಮತ್ತು ಸಣ್ಣ ಸೇತುವೆಗಳು, RUB, ERS/ತಡೆಗೋಡೆ ಸ್ಯಾಕ್ರಿಫಿಸಿಯಲ್ ತಡೆಗೋಡೆ, ಚರಂಡಿಗಳು, ಗಡಿ ಗೋಡೆ, ಬೇಲಿ ನಿರ್ಮಾಣ, ತಲಾ 6.53 ಕಿ.ಮೀ ಉದ್ದದ 4 ಹಳಿಗಳ ಜೋಡಣೆ ಹಾಗೂ ನಾಗವಾರ ಮತ್ತು ಕನಕನಗರ ನಿಲ್ದಾಣದ ಬಾಕ್ಸ್‌ಗಳ ನಿರ್ಮಾಣ. ಜೊತೆಗೆ, ಬೆನ್ನಿಗಾನಹಳ್ಳಿಯಿಂದ ಬಾಣಸವಾಡಿ ಮತ್ತು ಬಾಣಸವಾಡಿಯಿಂದ ಹೆಬ್ಬಾಳದವರೆಗಿನ ಮಾರ್ಗದಲ್ಲಿ, ಬಿಎಸ್‌ಟಿಪಿ ಕಾರಿಡಾರ್–2 ರ ಅಡಿಯಲ್ಲಿ ಹಿಂದಿನ ಗುತ್ತಿಗೆದಾರರು ನಿರ್ವಹಿಸಿದ ಕಾಮಗಾರಿಗಳಿಗೆ (ನಿಲ್ದಾಣದ ಕಟ್ಟಡಗಳನ್ನು ಹೊರತುಪಡಿಸಿ) ಅಗತ್ಯವಿರುವ ಕಡೆಗಳಲ್ಲಿ ವಿನ್ಯಾಸದ ಮೌಲ್ಯಮಾಪನ ಮತ್ತು ಸ್ಥಿರತೆಯ ಪರಿಶೀಲನೆ ಸೇರಿದಂತೆ ಇತರ ಸಂಬಂಧಿತ ಮೂಲಸೌಕರ್ಯ ಕಾಮಗಾರಿಗಳು (ಬಾಕಿ ಇರುವ ಕಾಮಗಾರಿಗಳು).



1.2 ಮೀಟರ್ ಲಿಫ್ಟ್ ಹೈಟ್‌ನ ಇಆರ್‌ಎಸ್ ಕಾಂಕ್ರೀಟ್ ಕಾಮಗಾರಿ ಪ್ರಗತಿಯಲ್ಲಿದೆ.

ಪ್ರಗತಿ

ಸಂರಚನೆ	ವಿವರ	ಒಟ್ಟು ಕಾರ್ಯವ್ಯಾಪ್ತಿ	ಪೂರ್ಣಗೊಂಡಿರುವುದು	ಬಾಕಿ
ಇಆರ್‌ಎಸ್	ರ‍್ಯಾಫ್ಟ್ (mr)	5327	20	5307
	1ನೇ ಲಿಫ್ಟ್ ಗೋಡೆ(mtr)	5437	100	5337
ಇಆರ್‌ಎಸ್	2ನೇ ಲಿಫ್ಟ್ ಗೋಡೆ(mtr)	7022	110	6912
ಇಆರ್‌ಎಸ್	3ನೇ ಲಿಫ್ಟ್ ಗೋಡೆ(mtr)	6847	20	6827
ಎಸ್‌ಡಬ್ಲ್ಯೂಆರ್	ಸಾಕ್ರಿಫಿಸಿಯಲ್ ಗೋಡೆ	3716	20	3696
ಎಂಐಬಿಗಳು	ಎಂಐಬಿ (Nos)	28	01 (WIP)	27
ಆರ್‌ಯುಬಿಗಳು	ಆರ್‌ಯುಬಿ (Nos)	15	00	15



1.2 ಮೀಟರ್ ಫಾರ್ಮ್‌ವರ್ಕ್‌ನ ಸಾಕ್ರಿಫಿಸಿಯಲ್ ಗೋಡೆ ಕಾಮಗಾರಿ ಪ್ರಗತಿಯಲ್ಲಿದೆ.

ಕಾರಿಡಾರ್–2 ಪ್ಯಾಕೇಜ್–3

ಪಿ2 ಪ್ಯಾಕೇಜ್–3: ಬಿಎಸ್‌ಟಿಪಿ ಕಾರಿಡಾರ್–2 ಅಡಿಯಲ್ಲಿ, ಯಶವಂತಪುರದಿಂದ ಚಿಕ್ಕಬಾಣಾವರವರೆಗೆ 5.80 ಕಿ.ಮೀ. ಉದ್ದದ ಅಟ್–ಗ್ರೇಡ್ ವಿಭಾಗ (ಸಿಹೆಚ್: 18.400 ಕಿ.ಮೀ. ರಿಂದ ಸಿಹೆಚ್ 24.200 ಕಿ.ಮೀ.) ಹಾಗೂ 185 ಮೀ. ಉದ್ದದ ಎಲಿವೇಟೆಡ್ ವಯಾಡಕ್ಟ್ (ಸಿಹೆಚ್: 24.200 ರಿಂದ ಸಿಹೆಚ್24.385 ಕಿ.ಮೀ.) ನಿರ್ಮಾಣ ಕಾಮಗಾರಿಗಳು ಈ ಪ್ಯಾಕೇಜ್‌ನ ವ್ಯಾಪ್ತಿಯಲ್ಲಿವೆ. ಕಾಮಗಾರಿಗಳಲ್ಲಿ ಮಣ್ಣಿನ ಒಡ್ಡು, ಕಟಿಂಗ್‌ಗಳು ಹಾಗೂ ಬ್ಲಾಂಕೆಟಿಂಗ್, ರ‍್ಯಾಂಪ್, ರಸ್ತೆ ಮೇಲ್ಸೇತುವೆ, ಸಣ್ಣ ಸೇತುವೆಗಳು, ರಸ್ತೆ ಕೆಳಸೇತುವೆ, ಇಆರ್‌ಎಸ್/ತಡೆಗೋಡೆಗಳು, ಸಾಕ್ರಿಫಿಸಿಯಲ್ ತಡೆಗೋಡೆಗಳು, ಚರಂಡಿಗಳು, ಕಾಂಪೌಂಡ್ ಗೋಡೆ, ಬೇಲಿ ನಿರ್ಮಾಣ ಹಾಗೂ ಬಿಎಸ್‌ಟಿಪಿ ಕಾರಿಡಾರ್ ಜೊತೆಗೆ ಭಾರತೀಯ ರೈಲ್ವೆ ಕಾರಿಡಾರ್‌ಗೆ ಸಂಬಂಧಿಸಿದ ಇತರೆ ಮೂಲಸೌಕರ್ಯ ಕಾಮಗಾರಿಗಳು ಸೇರಿವೆ. ಈ ಪ್ಯಾಕೇಜ್‌ನಲ್ಲಿ, ಹಿಂದಿನ ಗುತ್ತಿಗೆದಾರರಿಂದ ಈಗಾಗಲೇ ನಿರ್ವಹಿಸಲಾದ ಕಾಮಗಾರಿಗಳ (ನಿಲ್ದಾಣ ಕಟ್ಟಡಗಳನ್ನು ಹೊರತುಪಡಿಸಿ) ವಿನ್ಯಾಸದ ಮೌಲ್ಯಮಾಪನ ಹಾಗೂ ಅಗತ್ಯವಿರುವ ಸ್ಥಳಗಳಲ್ಲಿ ಸ್ಥಿರತಾ ಪರಿಶೀಲನೆ ಕಾರ್ಯಗಳನ್ನೂ ಒಳಗೊಂಡಿದೆ. ಈ ಕಾಮಗಾರಿಗೆ 13–04–2026 ರಂದು ಸ್ವೀಕೃತಿ ಪತ್ರ ನೀಡಲಾಗಿದ್ದು, ಒಟ್ಟು ಗುತ್ತಿಗೆ ಮೌಲ್ಯ ₹106.29 ಕೋಟಿ (ಎಲ್ಲಾ ತೆರಿಗೆಗಳು ಮತ್ತು ಜಿಎಸ್‌ಟಿ ಸೇರಿದಂತೆ) ಆಗಿದೆ. ಈ ಪ್ಯಾಕೇಜ್‌ನ ಕಾಮಗಾರಿ ಪೂರ್ಣಗೊಳಿಸುವ ಅವಧಿ 18 ತಿಂಗಳುಗಳು ಆಗಿದೆ.

ಪ್ರಗತಿ

ಸಂರಚನೆ	ವಿವರ	ಕೈಗೆತ್ತಿಕೊಳ್ಳಲಾಗಿರುವುದು	ಪೂರ್ಣಗೊಂಡಿರುವುದು	ಬಾಕಿ
ಇಆರ್‌ಎಸ್	ರ‍್ಯಾಫ್ಟ್ (mr)	100	60	40
	ಗೋಡೆ(mtr)	100	80	20
ಎಂಐಬಿಗಳು	ಎಂಐಬಿ (Nos)	02	01	01
ಆರ್‌ಯುಬಿಗಳು	ಆರ್‌ಯುಬಿ (Nos)	02	01	01



ಇಆರ್‌ಎಸ್ ಕಾಮಗಾರಿ

ಕಾರಿಡಾರ್–4ಎ ನಿಲ್ದಾಣ ಪ್ಯಾಕೇಜ್

ಕಾರಿಡಾರ್–4ಎ: ಈ ಕಾರಿಡಾರ್‌ನಲ್ಲಿ ಒಟ್ಟು 9 ನಿಲ್ದಾಣಗಳು ನಿರ್ಮಾಣವಾಗುತ್ತಿದ್ದು, ಅವುಗಳಲ್ಲಿ 8 ಅಟ್–ಗ್ರೇಡ್ ನಿಲ್ದಾಣಗಳು ಹಾಗೂ 1 ಎಲಿವೇಟೆಡ್ ನಿಲ್ದಾಣ ಸೇರಿವೆ. ಅಟ್–ಗ್ರೇಡ್ ನಿಲ್ದಾಣಗಳಾದ ಹೀಲಲಿಗೆ, ಸಿಂಗೇನ ಅಗ್ರಹಾರ, ಹುಸ್ಕೂರು, ಅಂಬೇಡ್ಕರ್ ನಗರ, ಕಾರ್ಮೆಲರಾಂ, ಬೆಳ್ಳಂದೂರು, ದೊಡ್ಡನಕುಂದಿ ಮತ್ತು ಕಗ್ಗದಾಸಪುರ ಹಾಗೂ ಎಲಿವೇಟೆಡ್ ನಿಲ್ದಾಣವಾದ ಮಾರತಹಳ್ಳಿ ಸೇರಿವೆ.

ಹುಸ್ಕೂರು ನಿಲ್ದಾಣ: ಮುಖ್ಯ ನಿಲ್ದಾಣ ಬಾಕ್ಸ್‌ಗೆ ಸಂಬಂಧಿಸಿದ ಅಡಿಪಾಯ ಮತ್ತು ಕಾಂಕೋರ್ಸ್ ಮಟ್ಟದವರೆಗಿನ ಪಿಯರ್ ಕಾಮಗಾರಿ ಪೂರ್ಣಗೊಂಡಿದೆ. ಒಟ್ಟು 13 ಪೋರ್ಟಲ್ ಬೀಮ್‌ಗಳಲ್ಲಿ 10 ಪೋರ್ಟಲ್ ಬೀಮ್‌ಗಳ ಕಾಮಗಾರಿ ಪೂರ್ಣಗೊಂಡಿದೆ.

ಹೀಲಲಿಗೆ ನಿಲ್ದಾಣ: ಒಟ್ಟು 126 ಪೈಲ್‌ಗಳಲ್ಲಿ 41 ಪೈಲ್‌ಗಳ ಕಾಮಗಾರಿ ಪೂರ್ಣಗೊಂಡಿದೆ. 28 ಪೈಲ್ ಕ್ಯಾಪ್‌ಗಳಲ್ಲಿ 1 ಪೈಲ್ ಕ್ಯಾಪ್ ಪೂರ್ಣಗೊಂಡಿದೆ.

ಕಗ್ಗದಾಸಪುರ ನಿಲ್ದಾಣ: ರಾಫ್ಟ್ ಕಾಂಕ್ರೀಟ್ ಕಾಮಗಾರಿಯ 35% ಪೂರ್ಣಗೊಂಡಿದೆ. ಒಟ್ಟು 210 ಮೀ. ರಿಟೈನಿಂಗ್ ವಾಲ್‌ನಲ್ಲಿ 75 ಮೀ. ಕಾಮಗಾರಿ ಪೂರ್ಣಗೊಂಡಿದೆ.

ಬೆಳ್ಳಂದೂರು ನಿಲ್ದಾಣ: ಅಡಿಪಾಯ ಕಾಮಗಾರಿ ಹಾಗೂ ನೆಲಮಟ್ಟದವರೆಗಿನ ಪಿಯರ್ ನಿರ್ಮಾಣ ಪೂರ್ಣಗೊಂಡಿದೆ. ಒಟ್ಟು 459 ಮೀ. ರಿಟೈನಿಂಗ್ ವಾಲ್‌ನಲ್ಲಿ 441 ಮೀ. ಕಾಮಗಾರಿ ಪೂರ್ಣಗೊಂಡಿದೆ.

ಕಾರ್ಮೆಲರಾಂ ನಿಲ್ದಾಣ: ಗಟ್ಟಿಯಾದ ಬಂಡೆಯಲ್ಲಿ ಅಡಿಪಾಯಕ್ಕಾಗಿ ಉತ್ಖನನ ಕಾಮಗಾರಿ ಪ್ರಗತಿಯಲ್ಲಿದೆ.

ಸಿಂಗೇನ ಅಗ್ರಹಾರ ನಿಲ್ದಾಣ: ಒಟ್ಟು 12 ಗ್ರಿಡ್‌ಗಳಲ್ಲಿ 5 ಗ್ರಿಡ್‌ಗಳ ಕಿಅಆ ಕಾಮಗಾರಿ ಪೂರ್ಣಗೊಂಡಿದೆ. 12 ಗ್ರಿಡ್‌ಗಳಲ್ಲಿ 2 ಗ್ರಿಡ್‌ಗಳ ಜಲನಿರೋಧಕ ಕಾಮಗಾರಿ ಪೂರ್ಣಗೊಂಡಿದೆ.

ಅಂಬೇಡ್ಕರ್ ನಗರ ನಿಲ್ದಾಣ: ಒಟ್ಟು 12 ಗ್ರಿಡ್‌ಗಳಲ್ಲಿ 5 ಗ್ರಿಡ್‌ಗಳ ಸ್ಟೇಷನ್ ರಾಫ್ಟ್ ಕಾಮಗಾರಿ ಪೂರ್ಣಗೊಂಡಿದೆ. ಒಟ್ಟು 26 ಪಿಯರ್‌ಗಳಲ್ಲಿ 4 ಪಿಯರ್‌ಗಳ ಕಾಂಕೋರ್ಸ್ ಮಟ್ಟದವರೆಗಿನ ಕಾಮಗಾರಿ ಪೂರ್ಣಗೊಂಡಿದೆ.

ಕಾಸ್ಟಿಂಗ್ ಯಾರ್ಡ್: ಇದುವರೆಗೆ ಒಟ್ಟು 22 ಪ್ರೀಕಾಸ್ಟ್ ಐ/ಟಿ ಗರ್ಡರ್‌ಗಳ ನಿರ್ಮಾಣ ಪೂರ್ಣಗೊಂಡಿದೆ.

ಹುಸ್ಕೂರು ನಿಲ್ದಾಣ



ಪೋರ್ಟಲ್ ಬೀಮ್ ಕಾಮಗಾರಿ ಪ್ರಗತಿಯಲ್ಲಿದೆ

ಹೀಲಲಿಗೆ ನಿಲ್ದಾಣ



ಪೈಲ್ ಕ್ಯಾಪ್ ಕಾಂಕ್ರೀಟ್ ಪ್ರಗತಿಯಲ್ಲಿದೆ

ಬೆಳ್ಳಂದೂರು ನಿಲ್ದಾಣ



ಬೆಳ್ಳಂದೂರು ನಿಲ್ದಾಣದ ನೋಟ

ಕಗ್ಗದಾಸಪುರ ನಿಲ್ದಾಣ



ಕಗ್ಗದಾಸಪುರ ನಿಲ್ದಾಣದ ನೋಟ

ಕಾರ್ಮೆಲರಾಂ ನಿಲ್ದಾಣ



ರ‍್ಯಾಫ್ಟ್ ಅಗೆಯುವ ಕಾಮಗಾರಿ

ಅಂಬೇಡ್ಕರ್ ನಗರ ನಿಲ್ದಾಣ:



ರ‍್ಯಾಫ್ಟ್ ರಿಎನ್‌ಫೋರ್ಸ್‌ಮೆಂಟ್ ಕಾಮಗಾರಿ

ಸಿಂಗೇನ ಅಗ್ರಹಾರ ನಿಲ್ದಾಣ



ವಾಟರ್ ಪ್ರೂಫಿಂಗ್ ಕಾಮಗಾರಿ ಪ್ರಗತಿಯಲ್ಲಿದೆ

ಕಾಸ್ಟಿಂಗ್ ಯಾರ್ಡ್



ಕಾಸ್ಟಿಂಗ್ ಬೇ

ಕಾರಿಡಾರ್–4ಬಿ ನಿಲ್ದಾಣ ಪ್ಯಾಕೇಜ್

ಕಾರಿಡಾರ್–4ಬಿ ನಲ್ಲಿ ಒಟ್ಟು 9 ನಿಲ್ದಾಣಗಳಿವೆ. ಅವುಗಳಲ್ಲಿ 6 ಅಟ್–ಗ್ರೇಡ್ ಹಾಗೂ 3 ಎಲಿವೇಟೆಡ್ ನಿಲ್ದಾಣಗಳಾಗಿವೆ. ಅಟ್–ಗ್ರೇಡ್ ನಿಲ್ದಾಣಗಳು ಚನ್ನಸಂದ್ರ, ಹೊರಮಾವು, ತಣಿಸಂದ್ರ, ಜಕ್ಕೂರು, ಮುದ್ದನಹಳ್ಳಿ ಮತ್ತು ರಾಜಾನುಕುಂಟೆ. ಎಲಿವೇಟೆಡ್ ನಿಲ್ದಾಣಗಳು ಹೆಣ್ಣೂರು, ಆರ್. ಕೆ. ಹೆಗಡೆ ನಗರ ಮತ್ತು ಯಲಹಂಕ.

ರಾಜಾನುಕುಂಟೆ ನಿಲ್ದಾಣ: 247 ಮೀ.ಗಳಲ್ಲಿ 204 ಮೀ. ರಿಟೈನಿಂಗ್ ವಾಲ್ ಕಾಮಗಾರಿ ಪೂರ್ಣಗೊಂಡಿದೆ. 12 ಗ್ರಿಡ್‌ಗಳಲ್ಲಿ 7 ಗ್ರಿಡ್‌ಗಳ ರಾಫ್ಟ್ ಫೌಂಡೇಶನ್ ಕಾಂಕ್ರೀಟ್ ಕಾಮಗಾರಿ ಪೂರ್ಣಗೊಂಡಿದೆ. 26 ಪಿಯರ್‌ಗಳಲ್ಲಿ 6 ಪಿಯರ್‌ಗಳ ನಿರ್ಮಾಣ ಪೂರ್ಣಗೊಂಡಿದೆ.

ಜಕ್ಕೂರು ನಿಲ್ದಾಣ: 104 ಪೈಲ್‌ಗಳಲ್ಲಿ 102 ಪೈಲ್‌ಗಳ ಕಾಮಗಾರಿ ಪೂರ್ಣಗೊಂಡಿದೆ. ಪೈಲ್ ಕ್ಯಾಪ್ ಕಾಮಗಾರಿ ಪ್ರಗತಿಯಲ್ಲಿದೆ.

ಚನ್ನಸಂದ್ರ ನಿಲ್ದಾಣ: 12 ಗ್ರಿಡ್‌ಗಳಲ್ಲಿ 4 ಗ್ರಿಡ್‌ಗಳ ರಾಫ್ಟ್ ಕಾಂಕ್ರೀಟ್ ಕಾಮಗಾರಿ ಪೂರ್ಣಗೊಂಡಿದೆ.

ಥಣಿಸಂದ್ರ ನಿಲ್ದಾಣ: 89.5 ಮೀ.ಗಳಲ್ಲಿ 20 ಮೀ. ರಿಟೈನಿಂಗ್ ವಾಲ್ ಕಾಮಗಾರಿ ಪೂರ್ಣಗೊಂಡಿದೆ. ಉಳಿದ ರಿಟೈನಿಂಗ್ ವಾಲ್ ಕಾಮಗಾರಿ ಪ್ರಗತಿಯಲ್ಲಿದೆ.

ಮುದ್ದನಹಳ್ಳಿ ನಿಲ್ದಾಣ: GTI ಕಾಮಗಾರಿ ಪೂರ್ಣಗೊಂಡಿದೆ. ಬ್ಯಾರಿಕೇಡಿಂಗ್ ಕಾಮಗಾರಿ ಪ್ರಗತಿಯಲ್ಲಿದೆ.

ಹೊರಮಾವು ನಿಲ್ದಾಣ: ಉತ್ಖನನ ಕಾಮಗಾರಿ ಪ್ರಗತಿಯಲ್ಲಿದೆ.

ಚನ್ನಸಂದ್ರ ನಿಲ್ದಾಣ



ಚನ್ನಸಂದ್ರ ರ‍್ಯಾಫ್ಟ್ ಕ್ಯೂರಿಂಗ್

ಹೊರಮಾವು ನಿಲ್ದಾಣ



ತಡೆಗೋಡೆ ಕಾಮಗಾರಿ

ಜಕ್ಕೂರು ನಿಲ್ದಾಣ



ಪೈಲ್ ರಿಎನ್‌ಫೋರ್ಸ್‌ಮೆಂಟ್ ಕೇಜ್ ಅನ್ನು ಕೆಳಗಿಳಿಸುವುದು

ರಾಜಾನುಕುಂಟೆ ನಿಲ್ದಾಣ



ರ‍್ಯಾಫ್ಟ್ ಕಾಂಕ್ರೀಟ್ ಕಾಮಗಾರಿ ಪ್ರಗತಿಯಲ್ಲಿದೆ

ಥಣಿಸಂದ್ರ



ತಡೆಗೋಡೆ ಕಾಮಗಾರಿ

ಚನ್ನಸಂದ್ರ ಬಾಕ್ಸ್ ಕಾಮಗಾರಿ



ಟಾಪ್ ಸ್ಲಾಬ್‌ಗಾಗಿ ಸ್ಟೇಜಿಂಗ್ ಮತ್ತು ರಿಎನ್‌ಫೋರ್ಸ್‌ಮೆಂಟ್ ಕೇಜ್ ಕಾಮಗಾರಿ

ದ್ವಿಪಥೀಕರಣ ಕಾಮಗಾರಿಯ ಪ್ರಗತಿ



ಬೈಯಪ್ಪನಹಳ್ಳಿ–ಹೊಸೂರು ದ್ವಿಪಥೀಕರಣ ರೈಲು ಯೋಜನೆ (48.00 ಕಿ.ಮೀ.)

ಕಾರ್ಯಾರಂಭಗೊಂಡ ವಿಭಾಗಗಳು

ಕ್ರ.ಸಂ.	ವಿಭಾಗ	ಕಾರ್ಯಾರಂಭಗೊಂಡ ದಿನಾಂಕ
1	ಹೀಲಲಿಗೆ – ಕಾರ್ಮೆಲಾರಂ (10.5 ಕಿ.ಮೀ.)	20ನೇ ಫೆಬ್ರವರಿ 2023ರಂದು
2	ಕಾರ್ಮೆಲಾರಂ–ಬೆಳ್ಳಂದೂರು ರಸ್ತೆ (3.5 ಕಿ.ಮೀ.), ಹೊಸ ಹುಸ್ಕೂರು ಯಾರ್ಡ್ ಸೇರಿದಂತೆ	25ನೇ ನವೆಂಬರ್ 2025ರಂದು

ಕಾರ್ಯಾರಂಭಕ್ಕೆ ನಿಗದಿಪಡಿಸಿದ ವಿಭಾಗಗಳು

ಕ್ರ.ಸಂ.	ಆರ್ಥಿಕ ವರ್ಷ	ವಿಭಾಗ ಉದ್ದ ಕಿ.ಮೀ.ಗಳಲ್ಲಿ	ಉದ್ದ ಕಿ.ಮೀ.ಗಳಲ್ಲಿ	ಕಾರ್ಯಾರಂಭದ ಗುರಿ
1	2026–27	ಬೈಯಪ್ಪನಹಳ್ಳಿ ಬೆಳ್ಳಂದೂರು ರಸ್ತೆ	9.7	ಮಾರ್ಚ್ 27
2		ಹೀಲಲಿಗೆ ಆನೇಕಲ್ ರಸ್ತೆ	10.0	ನವೆಂಬರ್ 26
3		ಆನೇಕಲ್ ರಸ್ತೆ – ಮಾರನಾಯಕನಹಳ್ಳಿ	6.9	ನವೆಂಬರ್ 26
4		ಮಾರನಾಯಕನಹಳ್ಳಿ – ಹೊಸೂರು	7.6	ನವೆಂಬರ್ 26

ಹೊಸೂರು – ಹೀಲಲಿಗೆ ವಿಭಾಗದ ನಡುವಿನ ಕಾಮಗಾರಿಯ ಪ್ರಗತಿ



ಕಿ.ಮೀ. 166ರಲ್ಲಿ ಬ್ಯಾಂಕೆಟಿಂಗ್ ಕೆಲಸ ಪ್ರಗತಿಯಲ್ಲಿದೆ.



ಹೊಸೂರು ಯಾರ್ಡ್‌ನಲ್ಲಿರುವ ಎಸ್ & ಟಿ ಕಟ್ಟಡ.

ಕಾಮಗಾರಿಯ ಪ್ರಗತಿ (BYPL-HSRA)

ಕ್ರ.ಸಂ.	ವಿವರ	ಯೂನಿಟ್	ಒಟ್ಟು ವ್ಯಾಪ್ತಿ	ಒಟ್ಟು ಪ್ರಗತಿ	% ಪ್ರಗತಿ
1	ಅರ್ಥ್ ವರ್ಕ್	Cum	1152000	1150000	99%
2	ಬ್ಲಾಕೇಟಿಂಗ್	Cum	155500	144500	93%
3	ಸಣ್ಣ ಸೇತುವೆ	No.	101	99	98%
4	ಆರ್‌ಯುಬಿಗಳು	No.	15	14	93%
5	ದೊಡ್ಡ ಸೇತುವೆ/ಓಹೆಚ್‌ಪಿ	No.	7	5	85%
6	ಆರ್‌ಓಬಿ	No.	1	0	80%
7	ನಿಲ್ದಾಣ ಕಟ್ಟಡ	No.	4	4	100%
8	ಬ್ಯಾಲಸ್ಟ್ ಸರಬರಾಜು	Cum	140500	94300	67%
9	ಹಳಿ ಜೋಡಣೆ	Km	48	27	56%
10	S&T ಕಾಮಗಾರಿಗಳು	No.	6	4	70%
11	TRD ಕಾಮಗಾರಿಗಳು	Km	48	26	55%
12	ಕಾರ್ಯಾರಂಭ	Km	48	14	30%

ಯಶವಂತಪುರ–ಚನ್ನಸಂದ್ರ ಡಿ/ಎಲ್ (21.70 ಕಿ.ಮೀ.)

ಬೈಯಪ್ಪನಹಳ್ಳಿ – ಹೊಸೂರು ದ್ವಿಪಥೀಕರಣ ಯೋಜನೆ (48.00 ಕಿ.ಮೀ.)



ಕಾಮಗಾರಿಯ ಪ್ರಗತಿ (YPR-CSDR)

ಕ್ರ.ಸಂ.	ವಿವರ	ಯೂನಿಟ್	ಒಟ್ಟು ವ್ಯಾಪ್ತಿ	ಒಟ್ಟು ಪ್ರಗತಿ	% ಪ್ರಗತಿ
1	ಅರ್ಥ್ ವರ್ಕ್	Cum	191000	180126	94%
2	ಬ್ಲಾಕೇಟಿಂಗ್	Cum	62500	27004	43%
3	ರಿಟೈನಿಂಗ್ ಗೋಡೆ/ ಕಾಂಪೌಂಡ್ ಗೋಡೆ	Rm	6150	5150	84%
4	ಸಣ್ಣ ಸೇತುವೆ	Nos.	34	27	79%
5	ದೊಡ್ಡ ಸೇತುವೆ	Nos.	2	In progress	45%
6	ಆರ್‌ಓಬಿಗಳು	Nos.	1	0	30%
7	ನಿಲ್ದಾಣ ಕಟ್ಟಡ / ಸೇವಾ ಕಟ್ಟಡ	Nos.	6	4 Completed+ 2 In progress	78%
8	ಪ್ಲಾಟ್‌ಫಾರಂ	Nos.	1	In progress	80%
9	S&T ಕಾಮಗಾರಿಗಳು	Nos.	6	In progress	32%
10	TRD ಕಾಮಗಾರಿಗಳು	Km	19.4	In progress	22%
11	ಹಳಿ ಜೋಡಣೆ	Km	19.4	0	0%
12	ಕಾರ್ಯಾರಂಭ	Km	19.4	0	0%

ನಿಲ್ದಾಣ ಕಟ್ಟಡ ಕಾಮಗಾರಿಗಳು



YPR RRI ಕಟ್ಟಡದ ಪಾರ್ಸೆಲ್ ಕಚೇರಿಯ ಹೊರ ಭಾಗ



BAND RRI ಕಟ್ಟಡದ ಅಡಿಪಾಯದ ಪಿಸಿಸಿ ಹಾಗೂ ಪ್ಲಾಸ್ಟರ್ ಕಾಮಗಾರಿಗಳು

ಮಾರನಾಯಕನಹಳ್ಳಿ ಮತ್ತು ಹೊಸೂರು ವಿಭಾಗದ ನಡುವಿನ ರೈಲು ಹಳಿ ಜೋಡಣೆ ಕಾಮಗಾರಿಗಳು





ಕಾರ್ಯಾರಂಭಕ್ಕೆ ನಿಗದಿಪಡಿಸಿರುವ ವಿಭಾಗಗಳು

ಆರ್ಥಿಕ ವರ್ಷ	ವಿಭಾಗ	ಕಾರ್ಯಾರಂಭದ ಗುರಿ
2025 –26	ಯಶವಂತಪುರ – ಯಶವಂತಪುರ ಬೈಪಾಸ್– ಲೊಟ್ಟಿಗೊಲ್ಲಹಳ್ಳಿ– ಹೆಬ್ಬಾಳ + ಯಶವಂತಪುರ ಬೈಪಾಸ್–ಲೊಟ್ಟಿಗೊಲ್ಲಹಳ್ಳಿ 4ನೇ ರೈಲು ಮಾರ್ಗ	ಡಿಸೆಂಬರ್ 2026
2026 –27	ಹೆಬ್ಬಾಳ–ಬಾಣಸವಾಡಿ– ಬೈಯಪ್ಪನಹಳ್ಳಿ ಎ ಪ್ಯಾನೆಲ್	ಮಾರ್ಚ್ 2027

ಸೇತುವೆ ಮತ್ತು ನಿರ್ಮಾಣ ಕಾಮಗಾರಿಗಳು







ದ್ವಿಪಥೀಕರಣದ ಓಎಚ್‌ಇ ಹಾಗೂ ಸಾಮಾನ್ಯ ವಿದ್ಯುತ್ ಕಾಮಗಾರಿಗಳ ಪ್ರಗತಿ

ಹೆಬ್ಬಾಳ ನಿಲ್ದಾಣ ಯಾರ್ಡ್‌ನಲ್ಲಿ ಸಾಮರ್ಥ್ಯವನ್ನು ಹೆಚ್ಚಿಸುವ ಉದ್ದೇಶದಿಂದ ಎರಡು ಹೆಚ್ಚುವರಿ ರೈಲು ಹಳಿಗಳನ್ನು ನಿರ್ಮಿಸಲಾಗುತ್ತಿದೆ. ಪ್ಲಾಟ್‌ಫಾರಂ ತೆರವುಗೊಳಿಸುವ ಕಾಮಗಾರಿಗಳಿಗೆ ಅಗತ್ಯವಾದ ಹೊಸ ಪೋರ್ಟಲ್ ಅಳವಡಿಕೆ ಹಾಗೂ ಹೊಸ ಪೋರ್ಟಲ್‌ಗೆ ಓಎಚ್‌ಇ ಲೋಡ್ ವರ್ಗಾವಣೆ ಕಾಮಗಾರಿಗಳು ಪೂರ್ಣಗೊಂಡಿದ್ದು, ಉಳಿದ ಕಾಮಗಾರಿಗಳು ಪ್ರಗತಿಯಲ್ಲಿವೆ. ಹೊಸ ನಿಲ್ದಾಣ ಕಟ್ಟಡದಲ್ಲಿ ಆಂತರಿಕ ವಿದ್ಯುದೀಕರಣ ಕಾಮಗಾರಿಗಳು, ಸೇರಿದಂತೆ ವೈರಿಂಗ್ ಹಾಗೂ ಸ್ವಿಚ್/ಸಾಕೆಟ್ ಅಳವಡಿಕೆ ಕಾಮಗಾರಿಗಳು ಪೂರ್ಣಗೊಂಡಿವೆ.

ಬಿಎಸ್‌ಟಿಪಿ ಇ&ಎಂ ಕಾಮಗಾರಿಗಳು



ಹುಸ್ಕೂರು ನಿಲ್ದಾಣ: ಪ್ಲಾಟ್‌ಫಾರ್ಮ್ ಮಟ್ಟದಲ್ಲಿ ಬೆಳಕಿನ ಫಿಕ್ಚರ್‌ಗಳು ಹಾಗೂ ಕೇಬಲ್ ಟ್ರೇ ಬೆಂಬಲಗಳಿಗಾಗಿ ಟಿ–ಗರ್ಡರ್‌ಗಳಲ್ಲಿ ಇನ್‌ಸರ್ಟ್ ಪ್ಲೇಟ್‌ಗಳ ಅಳವಡಿಕೆ ಕಾಮಗಾರಿಯನ್ನು ಪರಿಶೀಲಿಸಿ ಅಂತಿಮಗೊಳಿಸಲಾಗಿದೆ.



ಚನ್ನಸಂದ್ರ ನಿಲ್ದಾಣ: ನಿಲ್ದಾಣ ಬಾಕ್ಸ್‌ನ ರಾಫ್ಟ್ ಮಟ್ಟದಲ್ಲಿ ಎಸ್ಕಲೇಟರ್ ಪಿಟ್/ಸಂಪ್ ಪಿಟ್ ನಿರ್ಮಾಣ ಕಾಮಗಾರಿಯನ್ನು ಸಂಬಂಧಿತ ಮಾನದಂಡಗಳು ಹಾಗೂ ನಿಯಮಾವಳಿಗಳ (ಕೋಡಲ್ ಅವಶ್ಯಕತೆಗಳ) ಅನುಸಾರವಾಗಿದೆಯೇ ಎಂಬುದನ್ನು ಪರಿಶೀಲಿಸಲಾಗಿದೆ.



ಯಶವಂತಪುರ ನಿಲ್ದಾಣ: ಎಚ್‌ವಿಎಸಿಶಾಫ್ಟ್‌ಗಳು, ವಿದ್ಯುತ್ ಶಾಫ್ಟ್‌ಗಳು ಹಾಗೂ ಅಗ್ನಿಶಾಮಕ ಹೋಸ್ ಕ್ಯಾಬಿನೆಟ್ ಸ್ಲೀವ್‌ಗಳನ್ನು ಅನುಮೋದಿತ ವಿನ್ಯಾಸದ ವಿಶೇಷಣಗಳಿಗೆ ಅನುಗುಣವಾಗಿರುವುದನ್ನು ಖಚಿತಪಡಿಸಿಕೊಳ್ಳಲು ಪರಿಶೀಲಿಸಲಾಯಿತು.

ಬಿಎಸ್‌ಟಿಪಿ ಡಿಪೋ ನವೀಕರಣ

ಸೋಲದೇವನಹಳ್ಳಿ ಡಿಪೋ



- ಸೋಲದೇವನಹಳ್ಳಿ ಡಿಪೋ ಸಿವಿಲ್ ಕಾಮಗಾರಿಗಳ ನಿರ್ಮಾಣಕ್ಕಾಗಿ ಟೆಂಡರ್ ಅನ್ನು 12.06.2026 ರಂದು CPP ಪೋರ್ಟಲ್‌ನಲ್ಲಿ ಆಹ್ವಾನಿಸಲಾಯಿತು. ಟೆಂಡರ್ ಸಲ್ಲಿಕೆಗೆ ಕೊನೆಯ ದಿನಾಂಕ 12.08.2026 ಆಗಿದೆ. ಬಿಡ್ ಪೂರ್ವ ಸಭೆಯನ್ನು ನಿಗದಿತ ವೇಳಾಪಟ್ಟಿಯಂತೆ 25.06.2026ರಂದು ನಡೆಸಲಾಗಿದ್ದು, ಟೆಂಡರ್‌ನಲ್ಲಿ ಭಾಗವಹಿಸಲು ಬಿಡ್‌ದಾರರಿಂದ ಉತ್ತಮ ಪ್ರತಿಕ್ರಿಯೆ ದೊರೆತಿದೆ.
- ಸೋಲದೇವನಹಳ್ಳಿ ಡಿಪೋಗಾಗಿ ಭೂಸ್ವಾಧೀನದಿಂದ ಬಾಧಿತವಾಗಿರುವ ಅಧಿಸೂಚಿತ ಭೂ ಮಾಲೀಕರಿಗಾಗಿ ಸಾಮಾಜಿಕ–ಆರ್ಥಿಕ ಸಮೀಕ್ಷೆ ಹಾಗೂ ಸಾರ್ವಜನಿಕ ಸಮಾಲೋಚನೆ ನಡೆಸಲಾಯಿತು. ಈ ಸಮಾಲೋಚನೆಗಳು 04 ಜುಲೈ 2026 ರಂದು ಚಿಕ್ಕಬಾಣಾವರದಲ್ಲಿ ಹಾಗೂ 10 ಜುಲೈ 2026 ರಂದು ಸೋಲದೇವನಹಳ್ಳಿಯಲ್ಲಿ ನಡೆದವು. ಈ ಕಾರ್ಯಕ್ರಮಗಳ ಉದ್ದೇಶ ಭೂಸ್ವಾಧೀನ ಪ್ರಕ್ರಿಯೆ, ಪರಿಹಾರ ಮತ್ತು ಪುನರ್ವಸತಿ ನೀತಿ, ಭೂಮಿ, ಕಟ್ಟಡಗಳು ಮತ್ತು ಮರಗಳ ಮೌಲ್ಯಮಾಪನ ವಿಧಾನ, ಪರಿಹಾರ ವಿತರಣೆಗೆ ಅಗತ್ಯ ದಾಖಲೆಗಳು ಹಾಗೂ ಕುಂದುಕೊರತೆ ನಿವಾರಣಾ ವ್ಯವಸ್ಥೆ ಕುರಿತು ಜಾಗೃತಿ ಮೂಡಿಸುವುದಾಗಿತ್ತು. ಜೊತೆಗೆ, ಕೌಶಲ್ಯಾಭಿವೃದ್ಧಿ ಕಾರ್ಯಕ್ರಮಗಳು ಮತ್ತು ಜೀವನೋಪಾಯ ಪುನಃಸ್ಥಾಪನೆ ಯೋಜನೆಗಳ ಮಾಹಿತಿಯನ್ನೂ ಬಾಧಿತರಿಗೆ ನೀಡಲಾಯಿತು.



ಅಕ್ಕುಪೇಟೆ ಡಿಪೋ

- ಅಕ್ಕುಪೇಟೆ ಡಿಪೋಗಾಗಿ ಸ್ವಾಧೀನಪಡಿಸಿಕೊಂಡ ಭೂಮಿಯನ್ನು ಸುರಕ್ಷಿತಗೊಳಿಸುವ ಉದ್ದೇಶದಿಂದ, ಡಿಪೋದ ಸುತ್ತಲೂ ಗಡಿ ಗೋಡೆ ನಿರ್ಮಾಣ ಕಾಮಗಾರಿಗೆ ಟೆಂಡರ್ ಅನ್ನು 08.05.2026 ರಂದು CPP ಪೋರ್ಟಲ್‌ನಲ್ಲಿ ಆಹ್ವಾನಿಸಲಾಯಿತು. ತಾಂತ್ರಿಕ ಬಿಡ್ ಅನ್ನು 02.07.2026 ರಂದು ತೆರೆಯಲಾಗಿದ್ದು, ಅಕ್ಕುಪೇಟೆ ಡಿಪೋದ ಗಡಿ ಗೋಡೆ ನಿರ್ಮಾಣ ಕಾಮಗಾರಿಗೆ ನಾಲ್ವರು ಬಿಡ್‌ದಾರರು ತಮ್ಮ ಬಿಡ್‌ಗಳನ್ನು ಸಲ್ಲಿಸಿದ್ದಾರೆ.

ಟೆಂಡರ್‌ಗಳು ಮತ್ತು ಅಧಿಸೂಚನೆಗಳು

ಕ್ರ.ಸಂ.	ಕಳೆದ 2 ತಿಂಗಳಲ್ಲಿ ವಿವಿಧ ಕಾಮಗಾರಿಗಳಿಗಾಗಿ ಆಹ್ವಾನಿಸಲಾದ ಟೆಂಡರ್‌ಗಳ ವಿವರಗಳನ್ನು ಕೆಳಗೆ ನೀಡಲಾಗಿದೆ.	ಪ್ರಕಟಿಸಿದ ದಿನಾಂಕ
ಎ	**ದ್ವಿಪಥೀಕರಣ ಕಾಮಗಾರಿಗಳು**	
1.	● **ವಿವರಣೆ:** ಬೈಯ್ಯಪ್ಪನಹಳ್ಳಿ – ಹೊಸೂರು ದ್ವಿಪಥೀಕರಣ ಯೋಜನೆ–ಅನೇಕಲ್ ರಸ್ತೆ (ಹೊರತುಪಡಿಸಿ)–ಹೀಲಲಿಗೆ (ಹೊರತುಪಡಿಸಿ) ವಿಭಾಗದ ಕಿ.ಮೀ. 173/784 ರಿಂದ 182/338 ರವರೆಗೆ ಖಆಖಜಿ ನಿರ್ದಿಷ್ಟತೆ (ಖಖಖ–ಉಇ–1) ಗೆ ಅನುಗುಣವಾದ ಯಂತ್ರದಿಂದ ಪುಡಿಮಾಡಿದ ಟ್ರ್ಯಾಕ್ ಬ್ಯಾಲಸ್ಟ್ ತಯಾರಿಕೆ, ಪೂರೈಕೆ ಮತ್ತು ಸಂಗ್ರಹಣೆ. **ಟೆಂಡರ್ ಮೊತ್ತ:** ರೂ. 3,34,45,428/– **ಅವಧಿ:** 06 ತಿಂಗಳು	18-05-2026
2.	● **ವಿವರಣೆ:** ಬೈಯ್ಯಪ್ಪನಹಳ್ಳಿ–ಹೊಸೂರು ದ್ವಿಪಥೀಕರಣ ಯೋಜನೆ–ಅನೇಕಲ್ ರಸ್ತೆ (ಹೊರತುಪಡಿಸಿ)–ಹೀಲಲಿಗೆ (ಹೊರತುಪಡಿಸಿ) ನಿಲ್ದಾಣಗಳ ನಡುವಿನ ಕಿ.ಮೀ. 173/784 ರಿಂದ 182/338 ಹಾಗೂ ಬೆಳ್ಳಂದೂರು ರಸ್ತೆ (ಹೊರತುಪಡಿಸಿ)–ಬೈಯ್ಯಪ್ಪನಹಳ್ಳಿ 'A' ಕ್ಯಾಬಿನ್ (ಒಳಗೊಂಡಂತೆ) ವಿಭಾಗದ ಕಿ.ಮೀ. 197/900 ರಿಂದ 205/500 ರವರೆಗೆ ಬ್ರಾಡ್ ಗೇಜ್ ಹಳಿ ಜೋಡಣೆ ಮತ್ತು ಸಂಬಂಧಿತ ಕಾಮಗಾರಿಗಳು. **ಟೆಂಡರ್ ಮೊತ್ತ:** ರೂ. 7,65,99,878/– **ಅವಧಿ:** 12 ತಿಂಗಳು	16-05-2026
3.	● **ವಿವರಣೆ:** ಯಶವಂತಪುರ –ಬೈಯ್ಯಪ್ಪನಹಳ್ಳಿ 'A' ಪ್ಯಾನೆಲ್ ನಡುವಿನ ಬ್ರಾಡ್ ಗೇಜ್ ಹಳಿ ಜೋಡಣೆ, ಇದರಲ್ಲಿ ಯಶವಂತಪುರ, ಲೊಟ್ಟಿಗೊಲ್ಲಹಳ್ಳಿ, ಹೆಬ್ಬಾಳ ಮತ್ತು ಬಾಣಸವಾಡಿ ಯಾರ್ಡ್‌ಗಳು ಸೇರಿದಂತೆ ಇತರೆ ವಿವಿಧ ಕಾಮಗಾರಿಗಳು ಒಳಗೊಂಡಿವೆ. **ಟೆಂಡರ್ ಮೊತ್ತ:** ರೂ. 11,05,47,239/– **ಅವಧಿ:** 12 ತಿಂಗಳು	19-05-2026

ಕ್ರ.ಸಂ.	ಕಳೆದ 2 ತಿಂಗಳಲ್ಲಿ ವಿವಿಧ ಕಾಮಗಾರಿಗಳಿಗಾಗಿ ಆಹ್ವಾನಿಸಲಾದ ಟೆಂಡರ್‌ಗಳ ವಿವರಗಳನ್ನು ಕೆಳಗೆ ನೀಡಲಾಗಿದೆ.	ಪ್ರಕಟಿಸಿದ ದಿನಾಂಕ
ಬಿ	**ಬಿಎಸ್‌ಟಿಪಿ ಕಾಮಗಾರಿಗಳು – ಆಹ್ವಾನಿಸಲಾದ ಟೆಂಡರ್‌ಗಳು**	
1.	● **ವಿವರಣೆ:** ಕಾರಿಡಾರ್–2, ಪ್ಯಾಕೇಜ್–1–ಬೆನ್ನಿಗಾನಹಳ್ಳಿಂದಿಂದ ಶೆಟ್ಟಿಹಳ್ಳಿವರೆಗೆ ಬಿಎಸ್‌ಟಿಪಿಯ ಕಾರಿಡಾರ್–2ರಲ್ಲಿ 7.795 ಕಿ.ಮೀ. ಉದ್ದದ ಎಲಿವೇಟೆಡ್ ವಯಾಡಕ್ಟ್ (ರ‍್ಯಾಂಪ್‌ಗಳೊಂದಿಗೆ), ರೈಲು–ಕಮ್–ರಸ್ತೆ ಡಬಲ್ ಡೆಕ್ಕರ್ ವಯಾಡಕ್ಟ್, ಮತ್ತೀಕೆರೆಯ ಡಬಲ್ ಡೆಕ್ಕರ್ ನಿಲ್ದಾಣ, ಪ್ರವೇಶ/ನಿರ್ಗಮನ ವ್ಯವಸ್ಥೆಗಳು, ರಸ್ತೆ ಮೇಲ್ಸೇತುವೆ ರ‍್ಯಾಂಪ್ ವೈ–ಲೂಪ್ ರ‍್ಯಾಂಪ್, ಬೆನ್ನಿಗಾನಹಳ್ಳಿ ಬಿಎಸ್‌ಟಿಪಿ ವಯಾಡಕ್ಟ್ ರ‍್ಯಾಂಪ್, ಹೆಬ್ಬಾಳ, ಶೆಟ್ಟಿಹಳ್ಳಿ, ಪಾದಚಾರಿ ಮೇಲ್ಸೇತುವೆಗಳು ಮಲ್ಟಿ–ಮೋಡಲ್ ಇಂಟಿಗ್ರೇಷನ್ ಕಾಮಗಾರಿಗಳು, ಯಶವಂತಪುರದಲ್ಲಿ ಕಾರಿಡಾರ್–ರ ಉಪಸಂರಚನೆಯ ಭಾಗಶಃ ಕಾಮಗಾರಿಗಳು ಹಾಗೂ ಇತರೆ ಸಂಬಂಧಿತ ಮೂಲಸೌಕರ್ಯ ನಿರ್ಮಾಣ ಕಾಮಗಾರಿಗಳು. **ಟೆಂಡರ್ ಮೊತ್ತ:** ರೂ. 671,64,83,019/– **ಅವಧಿ:** 24 ತಿಂಗಳು	12-05-2026
2.	● **ವಿವರಣೆ:** ಕಾರಿಡಾರ್–4, ಪ್ಯಾಕೇಜ್–1–ಬೆನ್ನಿಗಾನಹಳ್ಳಿಯಿಂದ ಜಕ್ಕೂರಿನವರೆಗೆ 6.259 ಕಿ.ಮೀ. ಅಟ್–ಗ್ರೇಡ್ ವಿಭಾಗ, 3.681 ಕಿ.ಮೀ. ಎಲಿವೇಟೆಡ್ ವಯಾಡಕ್ಟ್, ಮಣ್ಣಿನ ತಡೆಗೋಡೆ, ಕಟಿಂಗ್, ಬ್ಲಾಂಕೆಟಿಂಗ್, ಸಣ್ಣ ಹಾಗೂ ದೊಡ್ಡ ಸೇತುವೆಗಳು ರಸ್ತೆ ಕೆಳಸೇತುವೆಗಳು, ಇಆರ್‌ಎಸ್/ತಡೆಗೋಡೆಗಳು, ಚರಂಡಿಗಳು, ಗಡಿ ಗೋಡೆ, ಬೇಲಿ ನಿರ್ಮಾಣ ಹಾಗೂ ಇತರೆ ಮೂಲಸೌಕರ್ಯ ಕಾಮಗಾರಿಗಳ ವಿನ್ಯಾಸ ಮತ್ತು ನಿರ್ಮಾಣ. ಹಿಂದಿನ ಗುತ್ತಿಗೆದಾರರು ನಿರ್ವಹಿಸಿರುವ ಕಾಮಗಾರಿಗಳ ವಿನ್ಯಾಸ ಮೌಲ್ಯಮಾಪನ ಹಾಗೂ ಸ್ಥಿರತೆ ಪರಿಶೀಲನೆಯೂ ಒಳಗೊಂಡಿದೆ (5 ನಿಲ್ದಾಣಗಳು ಮತ್ತು ಚನ್ನಸಂದ್ರ RCC ಬಾಕ್ಸ್ ಹೊರತುಪಡಿಸಿ). **ಅವಧಿ:** 24 ತಿಂಗಳು	13-05-2026
3.	● **ವಿವರಣೆ:** ಕಾರಿಡಾರ್–4, ಪ್ಯಾಕೇಜ್–2 – ಹೀಲಲಿಗೆಯಿಂದ ಬೆಳ್ಳಂದೂರಿನವರೆಗೆ 12.632 ಕಿ.ಮೀ. ನೆಲಮಟ್ಟದ ವಿಭಾಗದಲ್ಲಿ ಮಣ್ಣಿನ ತಡೆಗೋಡೆ, ಕಟಿಂಗ್, ಬ್ಲಾಂಕೆಟಿಂಗ್, ಸಣ್ಣ ಸೇತುವೆಗಳು, ರಸ್ತೆ ಮೇಲ್ಸೇತುವೆಗಳು, ರಸ್ತೆ ಕೆಳಸೇತುವೆಗಳು, ಇಆರ್‌ಎಸ್/ತಡೆಗೋಡೆಗಳು, ಚರಂಡಿಗಳು, ಗಡಿ ಗೋಡೆ, ಬೇಲಿ ಹಾಗೂ ಇತರೆ ಸಂಬಂಧಿತ ಮೂಲಸೌಕರ್ಯ ಕಾಮಗಾರಿಗಳ ವಿನ್ಯಾಸ ಮತ್ತು ನಿರ್ಮಾಣ. ಹಿಂದಿನ ಗುತ್ತಿಗೆದಾರರು ನಿರ್ವಹಿಸಿರುವ ಕಾಮಗಾರಿಗಳ ವಿನ್ಯಾಸ ಮೌಲ್ಯಮಾಪನ ಹಾಗೂ ಸ್ಥಿರತೆ ಪರಿಶೀಲನೆಯೂ ಒಳಗೊಂಡಿದೆ (ನಿಲ್ದಾಣ ಕಟ್ಟಡಗಳನ್ನು ಹೊರತುಪಡಿಸಿ). **ಅವಧಿ:** 18 ತಿಂಗಳು	13-05-2026
4.	● **ವಿವರಣೆ:** ಕಾರಿಡಾರ್–4, ಎಲ್‌ಸಿ ನಿರ್ಮೂಲನೆ–ಪ್ಯಾಕೇಜ್–1– ಹೀಲಲಿಗೆಯಿಂದ ರಾಜಾನುಕುಂಟೆಯವರೆಗೆ 2 ರಸ್ತೆ ಮೇಲ್ಸೇತುವೆಗಳು ಮತ್ತು 1 ರಸ್ತೆ ಕೆಳಸೇತುವೆ ನಿರ್ಮಾಣ, ಜೊತೆಗೆ ಲೆವೆಲ್ ಕ್ರಾಸಿಂಗ್‌ಗಳ ಬದಲಿಗೆ ಸೇವಾ ರಸ್ತೆಗಳು ಹಾಗೂ ಚರಂಡಿಗಳ ನಿರ್ಮಾಣ ಕಾಮಗಾರಿಗಳು. **ಟೆಂಡರ್ ಮೊತ್ತ:** ರೂ. 59,61,15,897/– **ಅವಧಿ:** 18 ತಿಂಗಳು	13-05-2026
5.	● **ವಿವರಣೆ:** ಕಾರಿಡಾರ್–4, ಎಲ್‌ಸಿ ನಿರ್ಮೂಲನೆ–ಪ್ಯಾಕೇಜ್–2–ಹೀಲಲಿಗೆಯಿಂದ ರಾಜಾನುಕುಂಟೆಯವರೆಗೆ 2 ರಸ್ತೆ ಮೇಲ್ಸೇತುವೆಗಳು ಹಾಗೂ ಲೆವೆಲ್ ಕ್ರಾಸಿಂಗ್‌ಗಳ ಬದಲಿಗೆ ಸೇವಾ ರಸ್ತೆಗಳು ಮತ್ತು ಚರಂಡಿಗಳ ನಿರ್ಮಾಣ. ಕಾಮಗಾರಿಗಳು. **ಟೆಂಡರ್ ಮೊತ್ತ:** ರೂ. 49,55,16,183/– **ಅವಧಿ:** 18 ತಿಂಗಳು	13-05-2026
6.	● **ವಿವರಣೆ:** ಬಿಎಸ್‌ಟಿಪಿ ಅಕ್ಕುಪೇಟೆ ಡಿಪೋದ ಸುತ್ತಲೂ ಗಡಿ ಗೋಡೆ (Boundary Wall) ನಿರ್ಮಾಣ ಕಾಮಗಾರಿ. **ಟೆಂಡರ್ ಮೊತ್ತ:** ರೂ. 3,46,93,291/– **ಅವಧಿ:** 5 ತಿಂಗಳು	08-05-2026
7.	● **ವಿವರಣೆ:** ಸೋಲದೇವನಹಳ್ಳಿ (ಚಿಕ್ಕಬಾಣಾವರ)ಯಲ್ಲಿ ಬಿಎಸ್‌ಟಿಪಿ ರೈಲು ನಿರ್ವಹಣಾ ಡಿಪೋ ನಿರ್ಮಾಣ, ಇದರಲ್ಲಿ ಆಡಳಿತ ಕಟ್ಟಡ, ಕಾರ್ಯಾಗಾರ, ನಾಗರಿಕ ಕಾಮಗಾರಿಗಳು, MEP ವ್ಯವಸ್ಥೆಗಳು, ಮೇಲ್ಛಾವಣಿ, ಸೂಚನಾ ಫಲಕಗಳು, ಆರ್ಕಿಟೆಕ್ಚರಲ್ ಅಂತಿಮ ಕಾಮಗಾರಿಗಳು, ಮಲಿನ ನೀರು ಶುದ್ಧೀಕರಣ ಘಟಕ (STP), ಬಾಹ್ಯ ಚರಂಡಿಗಳು, ಆಂತರಿಕ ರಸ್ತೆಗಳು, ಗಡಿ ಗೋಡೆ, ಸುಮಾರು 1.00 ಕಿ.ಮೀ. ನೆಲಮಟ್ಟದ ರೈಲು ಮಾರ್ಗ ನಿರ್ಮಾಣ, ಸುಮಾರು 400 ಮೀ. ಉದ್ದದ ವಯಾಡಕ್ಟ್ ಹಾಗೂ ಚಿಕ್ಕಬಾಣಾವರ ನಿಲ್ದಾಣದಿಂದ ಸೋಲದೇವನಹಳ್ಳಿ ಡಿಪೋವರೆಗೆ ಇತರೆ ಸಂಬಂಧಿತ ಕಾಮಗಾರಿಗಳು ಸೇರಿವೆ. **ಟೆಂಡರ್ ಮೊತ್ತ:** ರೂ. 200.03 ಕೋಟಿಗಳು. **ಅವಧಿ:** 24 ತಿಂಗಳು	12-06-2026

ಸುಸ್ಥಿರತೆಯ ಹಾದಿಯಲ್ಲಿ (SEMU)

ಕಾರಿಡಾರ್–2ರ ಯೋಜನೆಯಿಂದ ಬಾಧಿತ ಕುಟುಂಬಗಳ ಪುನರ್ವಸತಿ ಮತ್ತು ಪುನರ್ ಸ್ಥಾಪನಾ ಚಟುವಟಿಕೆಗಳು

ಕಾರಿಡಾರ್–2 ಗಾಗಿನ ಪುನರ್ವಸತಿ ಕ್ರಿಯಾ ಯೋಜನೆ ಈಗ ಅನುಷ್ಠಾನ ಹಂತವನ್ನು ತಲುಪಿದೆ; ಭೂಸ್ವಾಧೀನ ಪ್ರಕ್ರಿಯೆ ಪೂರ್ಣಗೊಂಡಿದ್ದು, ಯೋಜನೆಯಿಂದ ಬಾಧಿತರಾದ ವ್ಯಕ್ತಿಗಳ ಸ್ಥಳಾಂತರವನ್ನು ಯಶಸ್ವಿಯಾಗಿ ನಡೆಸಲಾಗಿದೆ. ಪುನರ್ವಸತಿಯ ಫಲಿತಾಂಶಗಳನ್ನು ಮೌಲ್ಯಮಾಪನ ಮಾಡಲು, ಕ–ರೈಡ್‌ನ ಸಾಮಾಜಿಕ ಮತ್ತು ಪರಿಸರ ನಿರ್ವಹಣಾ ಘಟಕವು (SEMU) ಅನಧಿಕೃತ ವಸತಿ ಪ್ರದೇಶಗಳ (ಕೊಳೆಗೇರಿ ನಿವಾಸಿಗಳು ಮತ್ತು ಅತಿಕ್ರಮಣದಾರರು) ಒಟ್ಟು 262 ಸ್ಥಳಾಂತರಗೊಂಡ ಕುಟುಂಬಗಳ ಪೈಕಿ 150 ಕುಟುಂಬಗಳ ಮಾದರಿ ಸಮೀಕ್ಷೆಯನ್ನು ನಡೆಸಿತು. ಪುನರ್ವಸತಿ ಸ್ಥಳಗಳು ತಮ್ಮ ಮೂಲ ನೆಲೆಗಳಿಗೆ ಹತ್ತಿರದಲ್ಲಿದ್ದ ಕಾರಣ, ಹೆಚ್ಚಿನ ಬಾಧಿತ ವ್ಯಕ್ತಿಗಳು ಕನಿಷ್ಠ ತೊಂದರೆಯೊಂದಿಗೆ ತಮ್ಮ ಜೀವನೋಪಾಯವನ್ನು ಯಶಸ್ವಿಯಾಗಿ ಮರುಸ್ಥಾಪಿಸಿಕೊಂಡಿದ್ದಾರೆ ಎಂದು ಮೌಲ್ಯಮಾಪನವು ಸೂಚಿಸುತ್ತದೆ. ಜೀವನೋಪಾಯ ಮರುಸ್ಥಾಪನೆ ಯೋಜನೆಯ ಅಡಿಯಲ್ಲಿ, ಬಾಧಿತ ವ್ಯಕ್ತಿಗಳನ್ನು ಕೌಶಲ್ಯ ಅಭಿವೃದ್ಧಿ ಮತ್ತು ಆದಾಯ–ಗಳಿಕೆಯ ಕಾರ್ಯಕ್ರಮಗಳೊಂದಿಗೆ ಜೋಡಿಸಲಾಗಿದೆ; ಫಲಾನುಭವಿಗಳು ಎಲೆಕ್ಟ್ರಿಕ್ ವಾಹನ ದುರಸ್ತಿ, ಕ್ಲೌಡ್ ಕಿಚನ್ ಹಾಗೂ ಸೌಂದರ್ಯ ಮತ್ತು ಆರೋಗ್ಯ (Beauty & Wellness) ಸೇವೆಗಳಂತಹ ಕೋರ್ಸ್‌ಗಳಲ್ಲಿ ನೋಂದಾಯಿಸಿಕೊಂಡಿದ್ದಾರೆ. ಈ ಸ್ಥಳಾಂತರವು ಉತ್ತಮ ವಸತಿ ಸೌಕರ್ಯಗಳು, ವಸತಿ ಹಕ್ಕಿನ ಭದ್ರತೆ ಹಾಗೂ ನೀರು, ನೈರ್ಮಲ್ಯ ಮತ್ತು ವಿದ್ಯುತ್‌ನಂತಹ ಅಗತ್ಯ ಸೇವೆಗಳ ಲಭ್ಯತೆಯನ್ನು ಸುಧಾರಿಸಿದೆ. ಜೊತೆಗೆ, ಅರ್ಹ ಬಾಧಿತ ವ್ಯಕ್ತಿಗಳನ್ನು ಪ್ರಧಾನ ಮಂತ್ರಿ ಜೀವನ್ ಜ್ಯೋತಿ ವಿಮಾ ಯೋಜನೆ (PMJJBY), ಪ್ರಧಾನ ಮಂತ್ರಿ ಸುರಕ್ಷಾ ವಿಮಾ ಯೋಜನೆ (PMSBY), ಪ್ರಧಾನ ಮಂತ್ರಿ ಜನ ಧನ ಯೋಜನೆ (PMJDY), ಆಯುಷ್ಮಾನ್ ಭಾರತ್ – ಪ್ರಧಾನ ಮಂತ್ರಿ ಜನ ಆರೋಗ್ಯ ಯೋಜನೆ (AB-PMJAY) ಮತ್ತು ಇ–ಶ್ರಮ್ (e-Shram) ಪೋರ್ಟಲ್‌ನಲ್ಲಿ ನೋಂದಣಿಯಂತಹ ವಿವಿಧ ಸರ್ಕಾರಿ ಸಾಮಾಜಿಕ ಭದ್ರತೆ ಮತ್ತು ಕಲ್ಯಾಣ ಯೋಜನೆಗಳ ವ್ಯಾಪ್ತಿಗೆ ತರಲಾಗಿದೆ. ಕಾರಿಡಾರ್–2 ರ ಪುನರ್ವಸತಿ ಕ್ರಿಯಾ ಯೋಜನೆಯು ಜೀವನೋಪಾಯದ ಮರುಸ್ಥಾಪನೆ, ಜೀವನ ಪರಿಸ್ಥಿತಿಗಳ ಸುಧಾರಣೆ, ಉದ್ಯೋಗಾರ್ಹತೆಗಾಗಿ ಕೌಶಲ್ಯ ವರ್ಧನೆ, ಆರೋಗ್ಯ ವಿಮಾ ಬೆಂಬಲ ಮತ್ತು ಸಾಮಾಜಿಕ ಭದ್ರತೆಯನ್ನು ಬಲಪಡಿಸುವಲ್ಲಿ ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಿದೆ ಹಾಗೂ ಬಾಧಿತ ಸಮುದಾಯಗಳ ದೀರ್ಘಕಾಲೀನ ಸಾಮಾಜಿಕ–ಆರ್ಥಿಕ ಯೋಗಕ್ಷೇಮಕ್ಕೆ ಕೊಡುಗೆ ನೀಡಿದೆ ಎಂದು ಈ ಫಲಿತಾಂಶಗಳು ಸಾಬೀತುಪಡಿಸುತ್ತವೆ.





ಮರಗಳ ಸ್ಥಳಾಂತರ: ಅಭಿವೃದ್ಧಿಯೊಂದಿಗೆ ಜೀವವೈವಿಧ್ಯದ ಸಂರಕ್ಷಣೆ

ಬೆಂಗಳೂರು ಉಪನಗರ ರೈಲು ಜಾಲವು ವಿಸ್ತರಿಸುತ್ತಿರುವ ಸಂದರ್ಭದಲ್ಲಿ, ನಗರದ ಹಸಿರು ಹೊದಿಕೆಗೆ ಆಗುವ ಪರಿಣಾಮವನ್ನು ಸಾಧ್ಯವಾದಷ್ಟು ಕಡಿಮೆಗೊಳಿಸುವ ಉದ್ದೇಶದಿಂದ, "ಉಳಿಸಿ – ಸ್ಥಳಾಂತರಿಸಿ – ಪರಿಹಾರವಾಗಿ ನೆಡಿ" (Retain → Translocate → Compensate) ಎಂಬ ವೈಜ್ಞಾನಿಕ ವಿಧಾನವನ್ನು ಅನುಸರಿಸುವ ಮೂಲಕ ಮೂಲಸೌಕರ್ಯ ಅಭಿವೃದ್ಧಿ ಮತ್ತು ಪರಿಸರ ಸಂರಕ್ಷಣೆಯ ನಡುವೆ ಸಮತೋಲನ ಕಾಯ್ದುಕೊಳ್ಳಲು ಕ-ರೈಡ್ ಬದ್ಧವಾಗಿದೆ. ಬಿಎಸ್‌ಟಿಪಿ ಕಾರಿಡಾರ್-2 ಮತ್ತು ಕಾರಿಡಾರ್-4 ಯೋಜನೆಗಳಿಗಾಗಿ ಅಡ್ಡಿಯಾಗಿರುವ ಮರಗಳನ್ನು ತೆರವುಗೊಳಿಸಲು ಅನುಮತಿ ಕೋರಲಾಗಿತ್ತು. ಕರ್ನಾಟಕ ಉಚ್ಚ ನ್ಯಾಯಾಲಯದ ನಿರ್ದೇಶನದ ಮೇರೆಗೆ ರಚಿಸಲಾದ **ಮರ ತಜ್ಞರ ಸಮಿತಿ** (Tree Expert Committee – TEC)ಯ ಶಿಫಾರಸುಗಳ ಆಧಾರದ ಮೇಲೆ 1,354 ಮರಗಳನ್ನು ಮೂಲ ಸ್ಥಳದಲ್ಲೇ ಉಳಿಸಲಾಗಿದ್ದು, 623 ಮರಗಳನ್ನು ಸ್ಥಳಾಂತರಿಸಲು ಗುರುತಿಸಲಾಗಿದೆ. ಮರಗಳ ಸ್ಥಳಾಂತರ ಪ್ರಕ್ರಿಯೆಯನ್ನು ಪಾರದರ್ಶಕವಾದ ಕಾನೂನುಬದ್ಧ ಚೌಕಟ್ಟಿನಡಿ ಕೈಗೊಳ್ಳಲಾಗುತ್ತದೆ. ಈ ಪ್ರಕ್ರಿಯೆಯಲ್ಲಿ ಟ್ರೀ ಆಫೀಸರ್/ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಪರಿಶೀಲನೆ, TECಯ ಜಂಟಿ ಸ್ಥಳ ಪರಿಶೀಲನೆ, ಸಾರ್ವಜನಿಕ ಅಧಿಸೂಚನೆ, ಆಕ್ಷೇಪಣೆಗಳ ವಿಚಾರಣೆ, ಅಧಿಕೃತ ಜ್ಞಾಪನಗಳ ಹೊರಡಿಕೆ ಹಾಗೂ ಕಾರ್ಯಗತಗೊಳಿಸುವ ಮೊದಲು ಕರ್ನಾಟಕ ಉಚ್ಚ ನ್ಯಾಯಾಲಯದ ಅನುಮೋದನೆ ಒಳಗೊಂಡಿರುತ್ತದೆ. ಮಾರ್ಗ ವಿನ್ಯಾಸದ ಸುಧಾರಣೆ ಮತ್ತು ಸ್ಥಳಕ್ಕೆ ಅನುಗುಣವಾದ ವಿನ್ಯಾಸ ಕ್ರಮಗಳ ಮೂಲಕ ಸಾಧ್ಯವಾದಷ್ಟು ಹೆಚ್ಚು ಮರಗಳನ್ನು ಮೂಲ ಸ್ಥಳದಲ್ಲೇ ಉಳಿಸುವುದಕ್ಕೆ ಆದ್ಯತೆ ನೀಡಲಾಗಿದೆ. ಇದರ ಫಲವಾಗಿ 1,354 ಮರಗಳನ್ನು ಅವುಗಳ ಮೂಲ ಸ್ಥಳದಲ್ಲೇ ಸಂರಕ್ಷಿಸಲಾಗಿದೆ. ಮೂಲ ಸ್ಥಳದಲ್ಲೇ ಉಳಿಸುವುದು ಸಾಧ್ಯವಾಗದ ಸಂದರ್ಭಗಳಲ್ಲಿ, ಗುರುತಿಸಲಾದ 623 ಮರಗಳ ಪೈಕಿ 309 ಮರಗಳನ್ನು ವೈಜ್ಞಾನಿಕ ವಿಧಾನದಲ್ಲಿ ಸ್ಥಳಾಂತರಿಸಲಾಗಿದೆ. ಇವುಗಳನ್ನು ಬೈರೋಹಳ್ಳಿ ಕೆರೆಯ ಬಫರ್ ವಲಯ ಸೇರಿದಂತೆ ಸೂಕ್ತ ಸರ್ಕಾರಿ ಭೂಮಿಗಳಲ್ಲಿ ಯಶಸ್ವಿಯಾಗಿ ಮರುನೆಡಲಾಗಿದೆ.

ಮರಗಳ ಸ್ಥಳಾಂತರ ಪ್ರಕ್ರಿಯೆ



ಮರವನ್ನು ಬೇರುಸಹಿತ ತೆರವುಗೊಳಿಸುವ ಮಣ್ಣಿನ ಅಗೆತ ಕಾಮಗಾರಿ.





ರೂಟ್ ಬಾಲ್ ಹೊರತೆಗೆಯುವಿಕೆ



ರೂಟ್ ಬಾಲ್ ಅನ್ನು ಸುರಕ್ಷಿತವಾಗಿ ಬಿಗಿಗೊಳಿಸುವುದು ಹಾಗೂ ಅಗತ್ಯ ಬೆಳವಣಿಗೆ ವರ್ಧಕಗಳ ಪೂರೈಕೆಗಳ ಕಾಮಗಾರಿ.

ಸ್ಥಳಾಂತರಿಸಲಾದ ಪ್ರೌಢ ಮರಗಳಲ್ಲಿ ಹೊಸ ಚಿಗುರುಗಳ ಬೆಳವಣಿಗೆ









ಸ್ಥಳಾಂತರದ ನಂತರದ ಆರೈಕೆ: ಮರಗಳ ಸ್ಥಳಾಂತರದ ಯಶಸ್ಸು ಅವುಗಳನ್ನು ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ವರ್ಗಾಯಿಸುವುದರೊಂದಿಗೆ ಮಾತ್ರ ಸೀಮಿತವಾಗಿರುವುದಿಲ್ಲ. ಸ್ಥಳಾಂತರಿಸಲಾದ ಮರಗಳು ಆರೋಗ್ಯಕರವಾಗಿ ಬೆಳೆಯಲು ಹಾಗೂ ದೀರ್ಘಕಾಲ ಉಳಿಯುವಂತೆ ಮಾಡಲು ಕ-ರೈಡ್ ಸಮಗ್ರ ಸ್ಥಳಾಂತರೋತ್ತರ ಆರೈಕೆ ಮತ್ತು ಮೇಲ್ವಿಚಾರಣಾ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಿದೆ. ಈ ಕಾರ್ಯಕ್ರಮದ ಅಡಿಯಲ್ಲಿ ನಿಯಮಿತ ನೀರಾವರಿ, ಮಲ್ಚಿಂಗ್ ಮತ್ತು ಪೋಷಕಾಂಶಗಳ ಪೂರೈಕೆ, ಕೀಟ ಹಾಗೂ ರೋಗ ನಿರ್ವಹಣೆ, ಅಗತ್ಯವಿರುವಲ್ಲಿ ರಚನಾತ್ಮಕ ಆಧಾರ (Structural Support) ಒದಗಿಸುವುದು ಸೇರಿದಂತೆ ವಿವಿಧ ಕ್ರಮಗಳನ್ನು ಕೈಗೊಳ್ಳಲಾಗುತ್ತದೆ. ವ್ಯವಸ್ಥಿತ ಸ್ಥಳಾಂತರೋತ್ತರ ಆರೈಕೆಯ ಫಲವಾಗಿ, ಸ್ಥಳಾಂತರಿಸಲಾದ ಮರಗಳಲ್ಲಿ ಸುಮಾರು 68–70% ಬದುಕುಳಿಯುವಿಕೆ ಸಾಧಿಸಲಾಗಿದೆ.ಇದಲ್ಲದೆ, ಸ್ಥಳಾಂತರಿಸಲಾದ ಮರಗಳ ಬೆಳವಣಿಗೆ ಮತ್ತು ಬದುಕುಳಿಯುವಿಕೆಯನ್ನು ಮೂರು ವರ್ಷಗಳವರೆಗೆ ನಿರಂತರವಾಗಿ ಮೇಲ್ವಿಚಾರಣೆ, ನಿರ್ವಹಣೆ ಹಾಗೂ ಮೌಲ್ಯಮಾಪನ ಮಾಡಲಾಗುತ್ತದೆ. ಇದರಿಂದ ಮರಗಳ ಸ್ಥಳಾಂತರ ಕಾರ್ಯದ ಪರಿಣಾಮಕಾರಿತ್ವವನ್ನು ಖಚಿತಪಡಿಸುವುದರ ಜೊತೆಗೆ, ಬೆಂಗಳೂರಿನ ನಗರ ಹಸಿರು ಪರಿಸರದ ಸಂರಕ್ಷಣೆಗೆ ಮಹತ್ವದ ಕೊಡುಗೆ ನೀಡಲಾಗುತ್ತಿದೆ.

ವಾಸ್ತವಿಕ ಸುರಕ್ಷತಾ ಅಭ್ಯಾಸಗಳ ಮೂಲಕ ತುರ್ತು ಪರಿಸ್ಥಿತಿಗೆ ಸನ್ನದ್ಧತೆ

ಕ-ರೈಡ್ ತನ್ನ ಎಲ್ಲಾ ನಿರ್ಮಾಣ ಸ್ಥಳಗಳಲ್ಲಿ ತುರ್ತು ಪರಿಸ್ಥಿತಿಗಳಿಗೆ ಸನ್ನದ್ಧತೆಯನ್ನು ಹೆಚ್ಚಿಸುವ ಮೂಲಕ ಕೆಲಸದ ಸ್ಥಳದ ಸುರಕ್ಷತೆಯ ಮೇಲಿನ ತನ್ನ ಬದ್ಧತೆಯನ್ನು ಮತ್ತಷ್ಟು ಬಲಪಡಿಸುತ್ತಿದೆ. ಸುರಕ್ಷತಾ ಜಾಗೃತಿ, ತುರ್ತು ಪರಿಸ್ಥಿತಿಗಳಿಗೆ ತ್ವರಿತ ಪ್ರತಿಕ್ರಿಯಿಸುವ ಸಾಮರ್ಥ್ಯ ಹಾಗೂ ಕಾನೂನುಬದ್ಧ ಸುರಕ್ಷತಾ ನಿಯಮಗಳ ಅನುಸರಣೆಯನ್ನು ಹೆಚ್ಚಿಸುವ ಉದ್ದೇಶದಿಂದ, ಕ-ರೈಡ್ ನಿಯಮಿತವಾಗಿ ಅಣಕು ತುರ್ತು ಅಭ್ಯಾಸಗಳು ಹಾಗೂ ಸುರಕ್ಷತಾ ಪ್ರಾತ್ಯಕ್ಷಿಕೆಗಳನ್ನು ಆಯೋಜಿಸುತ್ತದೆ. ಈ ಅಭ್ಯಾಸಗಳು ವಿದ್ಯುತ್ ಸ್ಪರ್ಶದಿಂದಾಗುವ ಅಪಘಾತಗಳು, ಅಗ್ನಿ ಅವಘಡಗಳು, ಉಷ್ಣ ಒತ್ತಡ ನಿರ್ವಹಣೆ, ಬೀದಿ ನಾಯಿಗಳಿಂದ ಉಂಟಾಗುವ ಅಪಾಯಗಳ ನಿರ್ವಹಣೆ, ಜಾರಿ ಬಿದ್ದು ಸಂಭವಿಸುವ ಅಪಘಾತಗಳು, ಸುರಕ್ಷಿತ ವಾಹನ ಚಾಲನಾ ತಂತ್ರಗಳು, ಸೋರಿಕೆ ನಿರ್ವಹಣೆ, ಸಿಪಿಆರ್ ಮತ್ತು ಪ್ರಥಮ ಚಿಕಿತ್ಸೆ, ಹಾಗೂ ಮಳೆಗಾಲದ ಸನ್ನದ್ಧತೆ ಸೇರಿದಂತೆ ವಿವಿಧ ಪ್ರಮುಖ ತುರ್ತು ಪರಿಸ್ಥಿತಿಗಳನ್ನು ಒಳಗೊಂಡಿರುತ್ತವೆ.

ಎತ್ತರದಿಂದ ಬೀಳುವ ಅಪಘಾತದ ರಕ್ಷಣಾ ಅಣಕು ಅಭ್ಯಾಸ–ಚಿಕ್ಕಬಾಣಾವರ ವಯಾಡಕ್ಟ್ ಪ್ರದೇಶ (ಪ್ಯಾಕೇಜ್ ಸಿ2ಬಿ)



ಪ್ಯಾಕೇಜ್ ಸಿ2ಬಿ ಅಡಿಯಲ್ಲಿ ಚಿಕ್ಕಬಾಣಾವರ ವಯಾಡಕ್ಟ್ ಪ್ರದೇಶದಲ್ಲಿ, ಎತ್ತರದಲ್ಲಿ ನಡೆಯುವ ಕಾಮಗಾರಿಗಳಿಗೆ ಸಂಬಂಧಿಸಿದ ತುರ್ತು ಪ್ರತಿಕ್ರಿಯೆ ಮತ್ತು ರಕ್ಷಣಾ ವ್ಯವಸ್ಥೆಗಳ ಕಾರ್ಯಕ್ಷಮತೆಯನ್ನು ಮೌಲ್ಯಮಾಪನ ಮಾಡುವ ಉದ್ದೇಶದಿಂದ ಸಮಗ್ರ ಎತ್ತರದಿಂದ ಬೀಳುವ ಅಪಘಾತದ ರಕ್ಷಣಾ ಅಣಕು ಅಭ್ಯಾಸವನ್ನು ಯಶಸ್ವಿಯಾಗಿ ನಡೆಸಲಾಯಿತು.

ರಾಷ್ಟ್ರೀಯ ವಿದ್ಯುತ್ ಸುರಕ್ಷತಾ ಸಪ್ತಾಹ 2026 – ಸಿ4ಎ ಕಾಸ್ಟಿಂಗ್ ಯಾರ್ಡ್‌ನಲ್ಲಿ ರಾತ್ರಿ ಅಣಕು ಅಭ್ಯಾಸ



ರಾಷ್ಟ್ರೀಯ ವಿದ್ಯುತ್ ಸುರಕ್ಷತಾ ಸಪ್ತಾಹ 2026ರ ಅಂಗವಾಗಿ, ನಡೆಯುತ್ತಿರುವ ಗರ್ಡರ್ ಕಾಸ್ಟಿಂಗ್ ಮತ್ತು ಸ್ಥಳಾಂತರ ಕಾರ್ಯಾಚರಣೆಗಳ ಸಂದರ್ಭದಲ್ಲಿ ಕಡಿಮೆ ಗೋಚರತೆಯ ಪರಿಸ್ಥಿತಿಗಳಲ್ಲಿ ತುರ್ತು ಸಿದ್ಧತೆಯನ್ನು ಪರಿಶೀಲಿಸಲು ಸಿ4ಎ ಸ್ಟೇಷನ್ ಕಾಸ್ಟಿಂಗ್ ಯಾರ್ಡ್‌ನಲ್ಲಿ ವಿಶೇಷ ರಾತ್ರಿ ಅಣಕು ಅಭ್ಯಾಸವನ್ನು ನಡೆಸಲಾಯಿತು.

ತಾತ್ಕಾಲಿಕ ವಿತರಣಾ ಮಂಡಳಿಯಲ್ಲಿ ವಿದ್ಯುತ್ ಆಘಾತ ಸಂಭವಿಸಿದ ಘಟನೆಯೊಂದನ್ನು ಆಧರಿಸಿ ಈ ಅಣಕು ಅಭ್ಯಾಸವನ್ನು ರೂಪಿಸಲಾಗಿದ್ದು, ಗಂಭೀರ ವಿದ್ಯುತ್ ತುರ್ತು ಪರಿಸ್ಥಿತಿಯ ಸಂದರ್ಭದಲ್ಲಿ ಕಾರ್ಮಿಕರು ಪರಿಣಾಮಕಾರಿಯಾಗಿ ಪ್ರತಿಕ್ರಿಯಿಸುವ ಸಾಮರ್ಥ್ಯವನ್ನು ಪರೀಕ್ಷಿಸಲಾಯಿತು. ಈ ಅಭ್ಯಾಸದಲ್ಲಿ ತುರ್ತು ಸಂವಹನ ವಿಧಾನಗಳು, ರಕ್ಷಣಾ ಸಮನ್ವಯ, ಪ್ರಥಮ ಪ್ರತಿಕ್ರಿಯೆ ಕ್ರಮಗಳು ಹಾಗೂ ಕೆಲಸಕ್ಕೆ ಸಂಬಂಧಿಸಿದ ವೈಯಕ್ತಿಕ ಸುರಕ್ಷತಾ ಸಾಧನಗಳ (PPE) ಸರಿಯಾದ ಬಳಕೆಯನ್ನು ಮೌಲ್ಯಮಾಪನ ಮಾಡಲಾಯಿತು.

ನಿಮ್ಮ ಬಿಎಸ್‌ಟಿಪಿ ಬಗ್ಗೆ ತಿಳಿಯಿರಿ



ಕಾರಿಡಾರ್–2 (ಮಲ್ಲಿಗೆ ಮಾರ್ಗ) ಬೆನ್ನಿಗಾನಹಳ್ಳಿ ಇಂದ ಚಿಕ್ಕಬಾಣಾವರದವರೆಗೆ



ಕಾರಿಡಾರ್–2 (ಮಲ್ಲಿಗೆ ಮಾರ್ಗ)



ಕರ್ನಾಟಕದ ಪ್ರಮುಖ ಹೂವಾದ "ಮಲ್ಲಿಗೆ" ಹೆಸರನ್ನು ಹೊಂದಿರುವ ಈ ಮಾರ್ಗವು ಬಿಎಸ್‌ಟಿಪಿಯ ಆದ್ಯತಾ ಕಾರಿಡಾರ್‌ಗಳಲ್ಲಿ ಒಂದಾಗಿದೆ. ಇದು ಬೆಂಗಳೂರು ನಗರದಾದ್ಯಂತ ಪೂರ್ವ–ಪಶ್ಚಿಮ ದಿಕ್ಕಿನಲ್ಲಿ ತಡೆರಹಿತ ಉಪನಗರ ರೈಲು ಸಂಪರ್ಕವನ್ನು ಒದಗಿಸುತ್ತದೆ.

ಈ ಕಾರಿಡಾರ್ ಬೆನ್ನಿಗಾನಹಳ್ಳಿಯಿಂದ ಚಿಕ್ಕಬಾಣಾವರದವರೆಗೆ ವಿಸ್ತರಿಸಿದ್ದು, ಸೊಲದೇವನಹಳ್ಳಿ ಡಿಪೋವರೆಗೆ ವಿಸ್ತರಣೆಯನ್ನು ಒಳಗೊಂಡಿದೆ. ಇದು ದಟ್ಟವಾದ ವಸತಿ ಪ್ರದೇಶಗಳು, ವಾಣಿಜ್ಯ ಕೇಂದ್ರಗಳು ಮತ್ತು ಉದ್ಯೋಗ ಕೇಂದ್ರಗಳ ಮೂಲಕ ಹಾದುಹೋಗುತ್ತಾ, ಈಗಿರುವ ರೈಲ್ವೆ, ಮೆಟ್ರೋ ಮತ್ತು ಬಸ್ ಜಾಲಗಳೊಂದಿಗೆ ಸಮನ್ವಯವನ್ನು ಸಾಧಿಸುತ್ತದೆ.

ಮುಖ್ಯಾಂಶಗಳು

- **ಕಾರಿಡಾರ್ ಉದ್ದ:** ಸುಮಾರು 25 ಕಿ.ಮೀ. ಉದ್ದವನ್ನು ಹೊಂದಿದ್ದು, ಇದರಲ್ಲಿ 8.02 ಕಿ.ಮೀ. ಎತ್ತರಿಸಿದ ಮಾರ್ಗ (Elevated Alignment) ಮತ್ತು 17.55 ಕಿ.ಮೀ. ನೆಲಮಟ್ಟದ ಮಾರ್ಗ (At-Grade Alignment) ಒಳಗೊಂಡಿದೆ.
- **ನಿಲ್ದಾಣಗಳು:** ಈ ಕಾರಿಡಾರ್‌ನಲ್ಲಿ ಬೆಂಗಳೂರಿನ ಪ್ರಮುಖ ವಸತಿ, ವಾಣಿಜ್ಯ ಮತ್ತು ಕೈಗಾರಿಕಾ ಕೇಂದ್ರಗಳಿಗೆ ತಡೆರಹಿತ ಸಂಪರ್ಕ ಒದಗಿಸುವಂತೆ ಕಾರ್ಯತಂತ್ರದ ಸ್ಥಳಗಳಲ್ಲಿ ಸ್ಥಾಪಿಸಲಾದ 12 ನಿಲ್ದಾಣಗಳು ಒಳಗೊಂಡಿವೆ. ಅವುಗಳೆಂದರೆ ಬೆನ್ನಿಗಾನಹಳ್ಳಿ (ಎಲಿವೇಟೆಡ್ ಇಂಟರ್‌ಚೇಂಜ್), ಕಸ್ತೂರಿ ನಗರ, ಸೇವಾ ನಗರ, ಬಾಣಸವಾಡಿ, ನಾಗವಾರ, ಕನಕ ನಗರ, ಹೆಬ್ಬಾಳ, ಮತ್ತಿಕೆರೆ (ಎಲಿವೇಟೆಡ್ ನಿಲ್ದಾಣ), ಯಶವಂತಪುರ ಎಲಿವೇಟೆಡ್ ಇಂಟರ್‌ಚೇಂಜ್), ಶೆಟ್ಟಿಹಳ್ಳಿ, ಮ್ಯಾದರಹಳ್ಳಿ ಮತ್ತು ಚಿಕ್ಕಬಾಣಾವರ (ಎಲಿವೇಟೆಡ್ ನಿಲ್ದಾಣ).
- ಈ ನಿಲ್ದಾಣಗಳನ್ನು ಪ್ರಯಾಣಿಕರ ಸುಗಮ ಸಂಚಾರ, ಉತ್ತಮ ಸಂಪರ್ಕ ವ್ಯವಸ್ಥೆ ಮತ್ತು ಇತರ ಸಾರ್ವಜನಿಕ ಸಾರಿಗೆ ವ್ಯವಸ್ಥೆಗಳೊಂದಿಗೆ ಸಮನ್ವಯ ಸಾಧಿಸುವ ಉದ್ದೇಶದಿಂದ ಯೋಜಿಸಲಾಗಿದೆ. ಇದರಿಂದ ಸಮಗ್ರ ಮತ್ತು ಸುಸ್ಥಿರ ನಗರ ಸಾರಿಗೆ ಜಾಲದ ಅಭಿವೃದ್ಧಿಗೆ ಸಹಕಾರಿಯಾಗಲಿದೆ.
- **ಇಂಟರ್‌ಚೇಂಜ್ ಸಂಪರ್ಕ ಮತ್ತು ಬಹು–ಮಾದರಿ ಸಾರಿಗೆ ಏಕೀಕರಣ:** ಬೆನ್ನಿಗಾನಹಳ್ಳಿ, ಹೆಬ್ಬಾಳ ಮತ್ತು ಯಶವಂತಪುರದಂತಹ ಪ್ರಮುಖ ಸ್ಥಳಗಳಲ್ಲಿ ಬೆಂಗಳೂರು ಮೆಟ್ರೋ, ಭಾರತೀಯ ರೈಲ್ವೆ, ಕೆಎಸ್‌ಆರ್‌ಟಿಸಿ ಮತ್ತು ಬಿಎಂಟಿಸಿ ಸಾರಿಗೆ ವ್ಯವಸ್ಥೆಗಳೊಂದಿಗೆ ನೇರ ಸಂಪರ್ಕ ಕಲ್ಪಿಸಲಾಗಿದ್ದು, ಬಹು–ಮಾದರಿ ಪ್ರಯಾಣಕ್ಕೆ ಅನುಕೂಲವಾಗಲಿದೆ.
- **ಸೊಲದೇವನಹಳ್ಳಿ ಡಿಪೋ:** ಈ ಡಿಪೋವು ಕಾರಿಡಾರ್–2ರ ಕಾರ್ಯಾಚರಣೆ ಮತ್ತು ನಿರ್ವಹಣೆ (O&M) ಕೇಂದ್ರವಾಗಿದೆ. ಡಿಪೋಗೆ ಸಂಪರ್ಕ ಕಲ್ಪಿಸುವ ಸಲುವಾಗಿ ಕಾರಿಡಾರ್–2ರ ಮಾರ್ಗವನ್ನು ಚಿಕ್ಕಬಾಣಾವರದಾಚೆಗೆ ಸೊಲದೇವನಹಳ್ಳಿ ಡಿಪೋದವರೆಗೆ ವಿಸ್ತರಿಸಲಾಗಿದೆ. ಯೋಜನೆಯ ಸಂಪೂರ್ಣ ಅವಧಿಯಲ್ಲಿ ವಿಶ್ವಾಸಾರ್ಹ, ಸುರಕ್ಷಿತ ಮತ್ತು ಪರಿಣಾಮಕಾರಿ ಉಪನಗರ ರೈಲು ಸೇವೆಗಳನ್ನು ಖಚಿತಪಡಿಸುವಲ್ಲಿ ಈ ಡಿಪೋ ಪ್ರಮುಖ ಪಾತ್ರ ವಹಿಸಲಿದೆ.
- **ಪ್ರಯಾಣ ಸಮಯದ ಕಡಿತ:** ರಸ್ತೆ ಸಂಚಾರ ದಟ್ಟಣೆಯಿಂದ ಮುಕ್ತವಾದ ಹೆಚ್ಚಿನ ಆವರ್ತನದ ಉಪನಗರ ರೈಲು ಸೇವೆಯನ್ನು ಒದಗಿಸುವ ಮೂಲಕ, ಈ ಕಾರಿಡಾರ್ ಉತ್ತರ ಬೆಂಗಳೂರಿನಾದ್ಯಂತ ಪ್ರಯಾಣ ಸಮಯವನ್ನು ಗಣನೀಯವಾಗಿ ಕಡಿಮೆ ಮಾಡಲಿದೆ.
- **ಸುಸ್ಥಿರ ನಗರ ಸಾರಿಗೆ:** ಖಾಸಗಿ ವಾಹನಗಳ ಬಳಕೆಯಿಂದ ಸಾರ್ವಜನಿಕ ಸಾರಿಗೆ ಬಳಕೆಯತ್ತ ಜನರನ್ನು ಪ್ರೋತ್ಸಾಹಿಸುವ ಮೂಲಕ, ಈ ಯೋಜನೆಯು ಸಂಚಾರ ದಟ್ಟಣೆ, ಇಂಧನ ಬಳಕೆ ಮತ್ತು ವಾಹನಗಳಿಂದ ಉಂಟಾಗುವ ಮಾಲಿನ್ಯವನ್ನು ಕಡಿಮೆ ಮಾಡಲು ಸಹಾಯ ಮಾಡುತ್ತದೆ.

ಮತ್ತಿಕೆರೆ ಡಬಲ್–ಡೆಕ್ಕರ್ ರಚನೆ



- ಕಾರಿಡಾರ್–2ರ ಪ್ರಮುಖ ಎಂಜಿನಿಯರಿಂಗ್ ವಿಶೇಷತೆಗಳಲ್ಲಿ ಒಂದಾದ ಸುಮಾರು 1.2 ಕಿ.ಮೀ. ಉದ್ದದ ಮತ್ತಿಕೆರೆ ಡಬಲ್–ಡೆಕ್ಕರ್ ರಚನೆಯನ್ನು ಮತ್ತಿಕೆರೆ ಮತ್ತು ಯಶವಂತಪುರದ ನಡುವಿನ ಮೋಹನ್ ಕುಮಾರ್ ರಸ್ತೆಯಲ್ಲಿ ನಿರ್ಮಿಸಲಾಗುತ್ತಿದೆ. ಸೀಮಿತ ನಗರ ಪ್ರದೇಶದ ಸ್ಥಳಾವಕಾಶವನ್ನು ಅತ್ಯುತ್ತಮವಾಗಿ ಬಳಸಿಕೊಳ್ಳುವ ಉದ್ದೇಶದಿಂದ ಈ ವಿನೂತನ ರಚನೆಯನ್ನು ವಿನ್ಯಾಸಗೊಳಿಸಲಾಗಿದೆ.

ಈ ನವೀನ ರಚನೆಯು ಒಳಗೊಂಡಿರುವ ಅಂಶಗಳು:

- **ಮಟ್ಟ 1:** ವಾಹನ ಸಂಚಾರದ ಚಲನೆಯನ್ನು ಸುಧಾರಿಸಲು ನಿರ್ಮಿಸಲಾದ ರಸ್ತೆ ಮೇಲ್ಸೇತುವೆ (Road Flyover).
- **ಮಟ್ಟ 2:** ಕಾರಿಡಾರ್–2ರ ಉಪನಗರ ರೈಲು ಸಂಚಾರವನ್ನು ಸಾಗಿಸುವ ಎತ್ತರದ ರೈಲು ವಯಾಡಕ್ಟ್ (Elevated Suburban Rail Viaduct).
- ಈ ಡಬಲ್–ಡೆಕ್ಕರ್ ವ್ಯವಸ್ಥೆಯು ದಟ್ಟವಾಗಿ ಅಭಿವೃದ್ಧಿಗೊಂಡಿರುವ ನಗರ ಪ್ರದೇಶದಲ್ಲಿ ಲಭ್ಯವಿರುವ ಸೀಮಿತ ರಸ್ತೆ ಹಕ್ಕು ಪ್ರದೇಶವನ್ನು ಸಮರ್ಥವಾಗಿ ಬಳಸಿಕೊಳ್ಳುವ ಮೂಲಕ, ಒಂದೇ ಕಾರಿಡಾರ್‌ನಲ್ಲಿ ರಸ್ತೆ ಮತ್ತು ರೈಲು ಮೂಲಸೌಕರ್ಯ ಎರಡನ್ನೂ ಒದಗಿಸುತ್ತದೆ.
- ಇದು ಭೂಸ್ವಾಧೀನದ ಅಗತ್ಯವನ್ನು ಕಡಿಮೆ ಮಾಡುವುದರ ಜೊತೆಗೆ, ಮತ್ತಿಕೆರೆ–ಯಶವಂತಪುರ ಮಾರ್ಗದಲ್ಲಿ ವಾಹನ ಸಂಚಾರದ ದಕ್ಷತೆ ಮತ್ತು ಸಾರ್ವಜನಿಕ ಸಾರಿಗೆ ಸಾಮರ್ಥ್ಯವನ್ನು ಗಣನೀಯವಾಗಿ ಹೆಚ್ಚಿಸುತ್ತದೆ.
- ಕಾರಿಡಾರ್–2 ಬಿಎಸ್‌ಟಿಪಿಯ ಪ್ರಮುಖ ಕಾರಿಡಾರ್ ಆಗಿ ಕಾರ್ಯನಿರ್ವಹಿಸುವ ನಿರೀಕ್ಷೆಯಿದ್ದು, ಮೊದಲ BSTP ರೈಲು ಬೋಗಿಗಳು ಈ ಹಳಿಗಳಲ್ಲಿ ಸಂಚರಿಸಿ ಪ್ರಯಾಣಿಕರಿಗೆ ಸೇವೆ ಒದಗಿಸಲಿವೆ. ಇದರಿಂದ ನಗರದ ಸಾರ್ವಜನಿಕ ಸಾರಿಗೆ ವ್ಯವಸ್ಥೆ ಮತ್ತಷ್ಟು ಬಲಗೊಳ್ಳಲಿದ್ದು, ಬೆಂಗಳೂರು ನಗರ ಸಾರಿಗೆ ವ್ಯವಸ್ಥೆಯ ಅಭಿವೃದ್ಧಿಯಲ್ಲಿ ಇದು ಮತ್ತೊಂದು ಮಹತ್ವದ ಮೈಲಿಗಲ್ಲಾಗಲಿದೆ.

ಬೆಂಗಳೂರು ಉಪನಗರ ಸಾರಿಗೆ ಯೋಜನೆ (ಬಿಎಸ್‌ಟಿಪಿ)

(ಒಟ್ಟು ಮಂಜೂರಾದ ಉದ್ದ: 148.17 ಕಿ.ಮೀ.)



S.No	BSRP CORRIDOR DETAILS	STATUS OF NUMBER OF BSRP STATIONS PRESENT ELEVATED	PRESENT AT GRADE	FUTURE (AS PER DFR) ELEVATED	FUTURE (AS PER DFR) AT GRADE	TOTAL No. OF STATIONS
1	CORRIDOR-1 (C-1)(KSR Bengaluru City-Devanahalli)	8	7	0	0	15
2	CORRIDOR-1 (C-1A)(Airport Link)	0	2	0	2*	4*
3	CORRIDOR-2(C-2)(Baiyyappanahalli-Soladevanahalli)	4	9	0	2	15
4	CORRIDOR-3 (C-3)(Kengeri-Whitefield)	8+5*	0	0	1	9
5	CORRIDOR-4 (C-4)(Heelalige-Rajanukunte)	3	16	0	1	20
	Total Number of BSRP Stations	23	32	0	4+2*	59+4*+5*+

(*) Indicates 4 Nos. of stations in Suburban Airport Link (including 2 nos future stn.). These are not considered in total no. of BSRP stations.
(*) Indicates 5 Nos. of stations between(Bengaluru Cantt.- Whitefield: Quadrupling Project).These are not considered in total no.of BSRP stations.
+ - Indicates proposed no. of additional BSRP future stations . Kindly note that these are not considered in the total no. of BSRP stations in any corridor.
# - Suburban Airport link through B K Halli Road indicated (under approval).

S.No	BSRP INTEGRATED STATIONS	CORRIDOR NO.
1	KSR Bengaluru city	1 & 3
2	Yesvantapur	1 & 2
3	Yelahanka	1 & 4
4	Benniganahalli	2 & 4
5	Airport Trumpet	1 & 1A
	Total No. of Integrated stations :	5

S.No	NAME OF THE CORRIDOR	ELEVATED (in Km)	AT GRADE (in Km)	TOTAL LENGTH (with buffer end) (in Km)
1	CORRIDOR-1 (C-1)	21.193	21.516	42.709
2	AIRPORT LINK(C-1A)#	3.475	4.565	8.04
3	CORRIDOR-2 (C-2)	8.757	19.87	28.627
4	CORRIDOR-3 (C-3)	16.571	17.050 (QDR)	22.074 +17.050(QDR)
5	CORRIDOR-4 (C-4)	10.195	37.688	47.883
	TOTAL LENGTH (in Km)	53.461	82.329	141.293*

(*)As per revised BSRP alignment plans.

01.12.2025

FOLLOW • LIKE • SHARE • SUBSCRIBE

WhatsApp Channel — Scan the QR Code to Follow — @KRIDE-BSTP
Instagram — Scan the QR Code to Follow — @KRIDE-BSTP
Facebook — Scan the QR Code to Follow — @KRIDE-BSTP
X (Twitter) — Scan the QR Code to Follow — @KRIDE-BSTP
LinkedIn — Scan the QR Code to Follow — @KRIDE-BSTP
YouTube — Scan the QR Code to Subscribe — @KRIDE-BSTP

ಕ–ರೈಡ್ / ಬಿ–ರೈಡ್
"ಸಂಪರ್ಕ ಸೌಧ", 1ನೇ ಮಹಡಿ, (ಓರಿಯನ್ ಮಾಲ್ ಎದುರು), ಡಾ. ರಾಜ್‌ಕುಮಾರ್ ರಸ್ತೆ, ರಾಜಾಜಿನಗರ 1ನೇ ಬ್ಲಾಕ್,
ಬೆಂಗಳೂರು – 560 010. ದೂರವಾಣಿ: 080–24482800, ಇ–ಮೇಲ್: md@kride.in